ಕೊರವಂಜಿ

A. ANANTHIAH.

ಸಂಪುಟ ೧೨ ನವೆಂಬರ್ ೧೯೫೪ ೮ ಸಂಚಿಕೆ

ಕುಹಕಿಡಿಗಳು

ಕೊರಿಯಾದಲ್ಲಿ ಈಗ ಭಾರತದ ಪಹರೆ ಪಡೆಯುತ್ತ ಅಷ್ಟು ಸ್ನೇಹ ತೋರಿಸದೆ ಇರುವ ಖೈದಿ ಸೈನಿಕರೂ, ದ|| ಕೊರಿಯಾ ಸೈನಿಕರೂ ಇರುವರಂತೆ.

—ಅಂದರೆ ಯಾರು ಯಾರಿಗೆ ಪಹರೆ ?

* * *

ಕೇಂದ್ರ ಸರ್ಕಾರದ ವ್ಯವಸಾಯ ಇಲಾಖಾಧಿಕಾರಿಗಳು "ಹಸನಾದ ತುಪ್ಪ"ದ ತಯಾರಿಕೆ ಮತ್ತು ಮಾರಾಟದಲ್ಲಿ ಆಸಕ್ತರಾಗಿರುವಂತೆ.

—ನಮ್ಮಲ್ಲಿ ತುಪ್ಪಕ್ಕಿಂತ ಬೆಣ್ಣೆಯ ಮೇಲೇ ಕಣ್ಣು ನಮ್ಮ ಅಧಿಕಾರಿಗಳಿಗೆ—ಹಚ್ಚಲು ಹೆಚ್ಚು ಉಪಯೋಗ ಎಂದು.

* * *

ಅರಾರಾ ಕಚೇರಿಯಲ್ಲಿ ಮೊನ್ನೆ ವಿದ್ಯುಚ್ಛಕ್ತಿ ಬಂದಾಗಿ ಪಂಕಾಗಳು ಕೆಲಸ ಮಾಡಲಿಲ್ಲವಂತೆ.

—ನೌಕರರೆಲ್ಲಾ ಆ ಶಕೆಯಲ್ಲಿ ನಿದ್ರೆ ಬಾರದೆ ಕೆಲಸ ಮಾಡಬೇಕಾಯಿತಂತೆ.

* * *

ನಮ್ಮ ಕಾಲೇಜಿನ ವಾರ್ಷಿಕೋತ್ಸವಕ್ಕೆ, ಹಾಸ್ಯಮಯ ಪ್ರಹಸನವನ್ನು ಆರಿಸ ಹುಡುಕಾಡಾಗ, ಅಧ್ಯಕ್ಷರಂದರಂತೆ "ಅಷ್ಟೆಲ್ಲಾ ಏಕೆ ಕಷ್ಟ! ನಮ್ಮ ಹುಡುಗರ ಕೈಲಿ ವಿಷಾದಾಂತ ನಾಟಕ ಆಡಿಸಿದರೇ ಸಾಕು! ಜನ ಬಿದ್ದು ಬಿದ್ದು ನಗುತ್ತಾರೆ" ಎಂದು.

*　　　*　　　*

ಕಟ್ಟೋವಾಗ ಅಣ್ಣತಮ್ಮಂದಿರು
ಆಳೋವಾಗ ದಾಯಾದಿಗಳು.

—ಹೊಸಗಾದೆ.

*　　　*　　　*

ಹಣದ ಮುಗ್ಗಟ್ಟು ಹೆಚ್ಚಾಗಿಬಿಟ್ಟದೆಯಾದ್ದರಿಂದ ನಮ್ಮ ಕಾರ್ಮಿಕರು ಈಗ ವಾರಕ್ಕೆ ಎರಡೇ ಸಿನಿಮಾ ನೋಡುವಂತಾಗಿದೆ ಎಂದು ಕಾರ್ಮಿಕ ಮುಖಂಡರು ಶೋಕಿಸಿದ್ದಾರೆ.

*　　　*　　　*

ದ್ರಾವಿಡ ಕಜಗಂನವರು ನ್ಯಾಯಾಸ್ಥಾನದಲ್ಲಿ ಹೇಳಿದರಂತೆ, "ಪಂ|| ನೆಹ್ರೂ ಅವರು ಉತ್ತಮ ದೇಶಸೇವಕರೇನೋ ಹೌದು, ಆದರೆ ಬ್ರಾಹ್ಮಣ ಅಂತ ಕರೀ ಬಾವುಟ ಪ್ರದರ್ಶಿಸಿದೆವು ಅಷ್ಟೇ" ಅಂತ.

*　　　*　　　*

ನಮ್ಮ ಪ್ರಸಿದ್ಧ ಗ್ರಂಥಕರ್ತರ ನೂತನ ಕಾದಂಬರಿಯ ಹಸ್ತಪ್ರತಿಯನ್ನು ಹೋಟಲಿನಲ್ಲಿ ಯಾರೋ ಕದ್ದರಂತೆ.

—ಕದ್ದವರಿಗೆ ಈಗ ಸಾರ್ವಜನಿಕರು ನಿಧಿ ಸಮರ್ಪಿಸಲು ಏರ್ಪಡಿಸುತ್ತಿದ್ದಾರಂತೆ.

*　　　*　　　*

ರಾತ್ರಿ ಹತ್ತು ಗಂಟೆ ಮೇಲೆ ಧ್ವನಿವರ್ಧಕ ಯಂತ್ರಗಳನ್ನು ನಿಷೇಧಿಸಲಾಗಿದೆ, ಎಂದು ಧ್ವನಿವರ್ಧಕ ಯಂತ್ರಗಳಿಂದ ರಾತ್ರಿಯೆಲ್ಲಾ ಪ್ರಸಾರ ಮಾಡಿದರಂತೆ.

*　　　*　　　*

ಈ ಸಾರಿ ದಸರಾ ಉತ್ಸವದಲ್ಲಿ—ಜಂಬೂ ಸವಾರಿ ಇತ್ತಿಲ್ಲವಂತೆ.

—ಆದರೂ ಐವರಿಗೆ ಬೊಂಬೂ ಸವಾರಿ ಆಯಿತಲ್ಲ!

*　　　*　　　*

ಆಂಧ್ರ ಪ್ರಾಂತ್ಯವಾದ ಮೇಲೆ—ರಾಜಾಜಿಯವರು ತಮ್ಮ ಪೋಲೀಸ್ ದಳವನ್ನು ತುಂಬಾ ಕಡಿಮೆ ಮಾಡುತ್ತಾರೆಂಬುದು ಸುಳ್ಳಂತೆ.

—— o ——

ಉರಿಗಾಳು

ಶೀತ ಮತ್ತು ಜ್ವರಗಳು ರಾಸಿಡಾನ್ ತಾಪವನ್ನು ಇಳಿಸುತ್ತದೆ. (ಜಾಹಿರಾತು) —ಇದು ಶೀತದ ಜಾಹಿರಾತಿರಬೇಕು.

* * *

"ಎವರೆಸ್ಟ್ ಶಿಖರದಮೇಲೆ ಸ್ಟಾಲಿನ್ ಪ್ರತಿಮೆ ನಿಲ್ಲಿಸಲು ರಷ್ಯನ್ ಯೋಜನೆ ... ." ಅಂದ ಹಾಗೆ ಸ್ಟಾಲಿನ್ ಪ್ರತಿಮೆ ಮೇಲೆ ಎವರೆಸ್ಟ್ ಶಿಖರ ನಿಲ್ಲಿಸಲು ಅಮೇರಿಕನ್ನರು ಯೋಜಿಸಬಹುದಲ್ಲವೆ?

* * *

ಪೂಜಾರಿಗಳ ಜಗಳದಿಂದ ಉಪವಾಸ (ಪುರಿನಗರದ ಸುದ್ದಿ) ಆದರೆ, ನೈವೇದ್ಯವನ್ನು ಯಾರೋ ನೆಲದಲ್ಲಿ ಹೂತಿಟ್ಟಿದಾರಂತಲ್ಲಾ....ದೇವರಿಗೆ ಅದಿರುವ ಜಾಗ ತಿಳಿಯದೇನು?

* * *

ಉಪವಾಸದಿಂದ ಆಂಧ್ರಪ್ರಾಂತವಾಯಿತೆಂದು ಯಾರೂ ಭಾವಿಸಬಾರದು (ಮಾನ್ಯ ಸುಬ್ರಹ್ಮಣ್ಯಂ) ಆಂಧ್ರಪಾಂತವಾದಮೇಲೆಯೇ ಅದು.

* * *

ಆಸ್ಪತ್ರೆಯನ್ನು ಸೇರಿದವರು ಗುಣಹೊಂದುತ್ತಿರುವರು (ಸುದ್ದಿ) ಇದು ನಿಜಕ್ಕೂ ಆಶ್ಚರ್ಯಕರವಾದ ಸುದ್ದಿ.

* * *

ಸಂಸ್ಕೃತವನ್ನು ಸುಲಭಗೊಳಿಸಿ ನಿತ್ಯಜೀವನದ ಸಂಭಾಷಣೆ ವ್ಯವಹಾರಗಳ ರಾಷ್ಟ್ರಭಾಷೆಯಾಗಿ ಸಿದ್ಧಪಡಿಸಿಕೊಳ್ಳಬಹುದು (ಸರ್ ಸೀ. ಪಿ.) ಸುಲಭಗೊಳಿಸಿದ ಈ ವಾಕ್ಯವೇ ಅದಕ್ಕೆ ಸೂಕ್ತ ಉದಾಹರಣೆ.

* * *

ಸಿನಿಮ ನಟರು ಮಂತ್ರಿಗಳಿಗಿಂತ ಹೆಚ್ಚು ಸಂಬಳ ತೆಗೆದುಕೊಳ್ಳುತ್ತಿರುವುದು ಶುದ್ಧ ನಾಚಿಕೆಗೇಡು (ಭಾಷಣ) ಆದರೆ, ಆವರು ಮಂತ್ರಿಗಳಿಗಿಂತ ಚೆನ್ನಾಗಿ ನಟಿಸುತ್ತಿದಾರಲ್ಲಾ.

* * *

ಮಂತ್ರಿಗಳೊಬ್ಬರ ಹತ್ತಿರ ಅವರ ಸ್ನೇಹಿತರು ಹೋಗಿ "ನೋಡಿ! ನಿಮ್ಮ ವಿಷಯದಲ್ಲಿ ಆತ ನೂರೆಂಟು ಸುಳ್ಳು ಹೇಳುತ್ತಿದ್ದಾನೆ" ಎಂದರಂತೆ ಅದಕ್ಕವರು "ಸುಳ್ಳು ಎಷ್ಟು ಬೇಕಾದರೂ ಹೇಳಲಿ! ನಿಜ ಹೇಳುವುದಕ್ಕೆ ಪ್ರಾರಂಭಿಸಿದಾಗ ನನಗೆ ತಿಳಿಸಿ....ಬಲಿಹಾಕ್ತೇನೆ" ಎಂದರಂತೆ.

* * *

ನಗಬಲ್ಲ ಪ್ರಾಣಿ ಮನುಷ್ಯ ಒಂದೇ....ನಗಿಸಬಲ್ಲ ಪ್ರಾಣಿಯೂ ಮನುಷ್ಯ ಒಂದೇ.

* * *

ನನಗೆ ಸಾವು ಯಾವ ಊರಲ್ಲಿ ಎಂಬುದನ್ನು ದಯವಿಟ್ಟು ತಿಳಿಸುತ್ತೀರಾ ಎಂದು ಒಬ್ಬರು ಹೊರಾ ಶಾಸ್ತ್ರಿಯನ್ನು ಪ್ರಶ್ನಿಸಿದಾರೆ, ಏಕೆಂದರೆ, ಆ ಸ್ಥಳಕ್ಕೆ ಹೋಗದೆ, ದೂರ ಇರಬಹುದಲ್ಲಾ, ಎಂದು.

* * *

ತುಂಗಭದ್ರಾ ಸಮಿತಿಗೆ ಮೂರು ತಿಂಗಳಿಗೊಮ್ಮೆ ಉಪಾಧ್ಯಕ್ಷ ಪೀಠಾಧಿಪತಿಯನ್ನು ಬದಲಾಯಿಸುತ್ತಾರಂತೆ... ಆದರೆ, ಪೀಠದ ಗತಿ?

* * *

ಅತ್ಯಂತ ಜನೋಪಕಾರಿಯಾದ ಕಂದಾಯ ಯಾವುದು?....ಭಾಷಣಗಳ ಮೇಲಿನ ಕಂದಾಯ.

* * *

ಲಂಚ ತೆಗೆದುಕೊಂಡರೆ, ಉಗ್ರ ಶಿಕ್ಷೆ ವಿಧಿಸಲಾಗುತ್ತದೆ ಎಂಬೊಂದು ಕಾನೂನು ಪಾಸುಮಾಡಿದಾರೆ ಎಂದು ಒಬ್ಬರು ಮಹನೀಯರು ಇನ್ನೊಬ್ಬರಿಗೆ ತಿಳಿಸಿದಾಗ, ಅವರು " ಹಾ! ಯಾವ ತಿಂಗಳಲ್ಲಿ?" ಎಂದು ಕೇಳಿದರಂತೆ.

ಕೊರವಾವಲೋಕನ

———o———

ಬಲು ಚೆನ್ನಾಗಿತ್ತು ಟೆನ್ನಿಸ್ ಆಟ. ಹುಡುಗರು ಏನು ಲಕ್ಷಣವಾಗಿ ಆಡಿದರು ಅಂತೀರಿ? ತಲೆ ನರೆತ ನಮ್ಮಂತಹವರು ಕೂತಲ್ಲೇ ಹೀಗೆ ಹೀಗೆ ಆಡಬೇಕು, ಅಂತ ಮನಸ್ಸಿನಲ್ಲಿ ಎಣಿಸಿದ ಹಾಗೇ ಅವರುಗಳು ಆಡಿದರು. ಭೇಷ್! ಅಂದುಕೊಂಡು ಕ್ಲಬ್ಬಿಗೆ ಹೋದೆ.

ವರಾಂಡಾದಲ್ಲೇ ಕಪ್ಪು ಅಂಗಿ ಧರಿಸಿದ, ಮಧ್ಯ ವಯಸ್ಸಿನವ ಬಲಗಾಲು ಮುಂದಿಟ್ಟು ಬಲತೋಳು ಮೇಲಕ್ಕೆತ್ತಿದ್ದಾನೆ. ಇದೇನು ಬಂತು! ಇಷ್ಟು ಹೊತ್ತಿನಲ್ಲೇ, ಇನ್ನೂ ಸೂರ್ಯ ಇರೋವಾಗಲೇ, ಈ ಗತಿ ಎಂದು ಹತ್ತಿರ ಹೋಗಿ ನೋಡಿದೆ.

ಕೊರವ! ಕೆಳದುಟಿಯನ್ನು ಮೇಲು ಹಲ್ಲಿಂದ ಬಿಳುಪೇರುವಷ್ಟರಮಟ್ಟಿಗೆ ಕಚ್ಚಿದಾನೆ. ಬಲ ತೋಳನ್ನು ಮೇಲಕ್ಕೆತ್ತುವ ರಭಸದಲ್ಲಿ ಅಂಗಿಯ ಕೊಂಕುಳು ಸ್ವಲ್ಪ ಹರಿದು ಒಳಗಡೆಯ ಬಿಳಿ ಷರ್ಟು ಚೂರು ಚೂರು ಪ್ರತ್ಯಕ್ಷವಾಗಿದೆ. ನೆಟ್ಟ ಗಣ್ಣು ಆಕಾಶದ ಕಡೆಗೆ. ದೆವ್ವ ಹಿಡಿದವರು ನೋಡುವ ರೀತಿ.

ಸುತ್ತಲೂ ಐದಾರು ಜನ ಎವೆಯಿಕ್ಕದೆ ಇವನನ್ನೇ ನೋಡುತ್ತಿದ್ದಾರೆ. ನಾನು ಬಂದಿದ್ದನ್ನು ಯಾರೂ ಗಮನಿಸಲಿಲ್ಲ. ಒಂದು ಕುರ್ಚಿಯ ಬೆನ್ನು ಹಿಡಿದುಕೊಂಡು ನಿಂತೆ.

ಒಂದು ನಿಮಿಷ ಆಗಿರಬಹುದು. ಬಲ ತೋಳಿನಿಂದ ಗಾಳಿಯನ್ನು ವೇಗವಾಗಿ ಸೀಳಿದ. "ಹೀಗೆ ಸರ್ವ್ ಮಾಡಬೇಕು" ಎಂದ. ಎಡಗೈಯಿಂದ ಹಣೆ ಬೆವರು ಒರೆಸಿಕೊಂಡ. ತನ್ನ ಕುರ್ಚಿಯಲ್ಲಿ ಕೂತುಕೊಂಡ. ನನ್ನನ್ನು ನೋಡಿದ. ನಾನಂ ಅಮೋಘವಾದ ಟೆನಿಸ್ ಸರ್ವಿಸ್ ಪ್ರದರ್ಶಿಸಿದಾಗಲೇ ಬಂದಿದ್ದೆಯಾ ಅಥವಾ ಆಮೇಲೋ ಎಂದ.

ಆಗಲೇ ಬಂದಿದ್ದೆ. ಆ ದೃಶ್ಯ ನೋಡಿದೆ. ಎಂದು ಅರ್ಥವಾಗುವಂತೆ ತಲೆಯನ್ನಾಡಿಸಿದೆ.

ಎಕ್ಸಿಭಿಷನ್ ಟೆನ್ನಿಸ್ ಮ್ಯಾಚ್ ನೋಡಿಕೊಂಡು ಬಂದೆಯಾ? ಅಂದ.

ಹ್ಞೂ ಅಂತ ಹ್ಞೂಗುಟ್ಟಿದೆ.

ಅವರು ನನ್ನ ತರಹ ಸರ್ವ್ ಮಾಡಲು ಕಲಿತಿದ್ದಾರಾ! ಅಂದ.

ಇಲ್ಲಾ ಎಂದೆ.

ಹಾಗಾದರೆ ಹೇಗೆ ಸರ್ವಿಸ್ ಮಾಡ್ತಾರೆ ಎಂದ.

"ಚಹಾ ಜಾಹೀರಾತಿನಲ್ಲಿ ಗಾಳಿಯಲ್ಲಿ ತೇಲುವಂತೆ ನಿಂತು ಸರ್ವ್ ಮಾಡೋ ಬೊಂಬೆಯಂತೆ ಸರ್ವ್ ಮಾಡ್ತಾರೆ" ಎಂದೆ.

"ಅದಕ್ಕೇ ಅವರು ಸೋಲೋದು. ಹಿಂದುಗಳು ಸಂಪ್ರದಾಯಸ್ಥರು. ಬಲ ಗೈಲಿ ಸರ್ವ್ ಮಾಡೋವಾಗ, ಅವಲಕ್ಷಣವಾಗಿ ಎಡಗಾಲು ಮುಂದಿಟ್ಟು ಸರ್ವ್ ಮಾಡೋದೇ! ಅದಕ್ಕೇ ಭಾರತೀಯರು ಪ್ರಪಂಚ ಟೆನ್ನಿಸ್ ಪಂದ್ಯಗಳಲ್ಲಿ ಮೂಲಾ ಕ್ರಾಂತರಾಗೋದು. ನಮ್ಮ ಧರ್ಮಕ್ಕೆ ತಕ್ಕಂತೆ ಶುಭ ಕಾರ್ಯಕ್ಕೆ ಅತ್ತೆ ಮನೆಗೆ ಸೊಸೆ ಕಾಲಿಡೋ ಹಾಗೆ, ಹಸೆಮಣೆ ಹತ್ತೋ ಹೆಣ್ಣಿನಂತೆ, ಬದುಕಬೇಕು ಎಂದು ಆಶೆ ಇದ್ದೋರು ಆಸ್ಪತ್ರೇಗೆ ಹೆಜ್ಜೆ ಇಡೋ ಹಾಗೆ, ಬಲಗಾಲನ್ನು ಲಕ್ಷಣವಾಗಿ ಮುಂದಿಟ್ಟು ಬಲಗೈಯನ್ನು ಎತ್ತಿ ಚೆಂಡನ್ನ ಬಾರಿಸಿದರೆ........

"ಆಗ ಭಾರ ಓರೆಯಾಗಿ ಆಟಗಾರ ಬಿದ್ದು ಬಿಡುತ್ತಾನೆ ಆ ರಭಸದಲ್ಲಿ— ಎಡಗಾಲು ಮೇಲೆ ಭಾರ ಬಿಟ್ಟು ಬಲಕೈಯಲ್ಲಿ ಕುಟ್ಟಿದರೆ ಪರವಾಗಿಲ್ಲ" ಎಂದು ನಾನು ಕೊರವನ ಭಾಷಣ ಮುಗಿಸಿದೆ.

ಆಶ್ಚರ್ಯ! ಕೊರವ ಕೆರಳಲಿಲ್ಲ. ಸಮಾಧಾನವಾಗಿ ಹೇಳಿದ "ಹಾಗಾದರೆ ನಮ್ಮ ಕ್ಲಬ್ಬಿನಲ್ಲಿ ನಮ್ಮ ಆಟಗಾರರ ಲಕ್ಷಣವಾದ ಆಟ ನೋಡು" ಎಂದ.

ಮಾರನೆಯ ಸಂಜೆ, ಆ ಸೊಬಗನ್ನೂ ನೋಡಿದೆ. ಕೊರವನ ಮಾತು ಸತ್ಯ.

* * *

"ನನಗೆ ಹದಿನೆಂಟನೇ ವರ್ಷಕ್ಕೆ ಮದುವೆಯಾಯಿತು. ಆಗ ನನ್ನ ಹೆಂಡತಿಗೆ ಒಂಭತ್ತೇ ವರ್ಷ. ಪರಕೆರ ಹಾಕ್ಕೋತಾ ಇದ್ದೋಳಿಗೆ ಮದುವೆ ಅಂತ ಕಿರಿಗೆ ಉಡಿಸಿ, ನನ್ನ ಬೆನ್ನ ಮೇಲೆ ಪಿಟ್ಟಿ ಹೊಡಿಸಿದರು. ಅವಳಿಗೂ ಆಗಿನಿಂದ ನನ್ನ ಬೆನ್ನ ಮೇಲೆ ಕುಟ್ಟಲು ಬಲು ಆಶೆ. ತಕ್ಕಮಟ್ಟಿಗೆ ಜೋರಾಗಿಯೇ ಕುಟ್ಟಿದಳು. ಆದರೂ ಹಿತವಾಗಿತ್ತು" ಎಂದು ಕುಳ್ಳಯ್ಯಂಗಾರಿ ಆತ್ಮಕತೆ ಹೇಳುತ್ತಿದ್ದ. ಈಗ ಅವನಿಗೆ ಅರವತ್ತು ವಯಸ್ಸು.

ವಯಸ್ಸಾದೋನು ಚಪಲ ತೀರಿಸಿಕೊಳ್ಳಲು ಆಕಸ್ಮಿಕಗಳ ನೆನಪು ಮಾಡಿ ಕೊಂಡರೆ ಏನು ತಪ್ಪು? ನಾವೆಲ್ಲಾ ಸುಮ್ಮಗಿದ್ದೆವು.

ಗಂಟಲು ಕೆರೆದು ಉ್ರ್ರಹ್ಲೊ ಉ್ರ್ರಹ್ಲೊ ಎಂದು ಕೇಕರಿಸಿದ ಶಬ್ದ. ಶಬ್ದ ಬಂದೆಡೆ ಕೊರವ ಗಂಟಲು ಸರಿಮಾಡಿಕೊಂಡು ಹೇಳಿದ.

"ಅಯ್ಯಂಗಾರಿ! ಆಗ ಪಿಟ್ಟಿ ಏಟು ತಿಂದಿದ್ದು ಏಕೆ ಹಿತವಾಗಿತ್ತು ಗೊತ್ತೆ ನಿನಗೆ" ಎಂದ

ಅಯ್ಯಂಗಾರಿ ನಾಮ ಕೂಡ ಅಡುಗಲಿಲ್ಲ ಸುಮ್ಮನಿದ್ದ. ಗೊತ್ತು ಕೊರವ ಏನೋ ಕುಹಕ ಕಾದಿರಿಸಿದ್ದಾನೆ ಎಂದು.

"ನಿನ್ನ ವಯಸ್ಸಿನಲ್ಲಿ ಅರ್ಧ ವಯಸ್ಸು ನಿನ್ನ ಹೆಂಡತಿಗೆ ಅದಕ್ಕೇ ಅಷ್ಟು ಹಿತವಾಗಿದ್ದದ್ದು. ಈಗ ಅವಳು ನಿನ್ನ ಬೆನ್ನ ಮೇಲೆ ಪಿಟ್ಟಿ ಹೊಡೆದರೆ, ಕೆನ್ನೆಗೆರಡು ಬಾರಿಸೋಣ ಎಂದನ್ನಿಸುತ್ತದೆ ನಿನಗೆ, ಅಲ್ಲವೇ? ಆದರೆ ಈಗಲೂ ಮೂವತ್ತು ವರ್ಷದಾಕೆ ಬೆನ್ನ ಮೇಲೆ ಪಿಟ್ಟಿ ಹೊಡೆಯಲು ಬಂದರೆ, ಆಗ ಆ ಹೊಡೆತಕ್ಕೆ ನಿನ್ನ ಕೃತಕ ದಂತಾವಳಿಗಳು ಹೊರಬಿದ್ದರೂ ಕೂಡ, ಖುಷಿಯಿಂದ ನೀನು ಬೊಚ್ಚು ಬಾಯನ್ನು ಹಿರಿದಗಲಿಸುತ್ತೀ, ಅಲ್ಲವೇ" ಎಂದ, ಕಣ್ಣು ಹುಬ್ಬು ಒಂದೇ ಕಡೆ ಹಾರಿಸುತ್ತಾ.

ಕುಳ್ಳೈಯಂಗಾರೀ ಮೂವತ್ತು ವರ್ಷದಾಕೆಯ ಪಿಟ್ಟಿ ಏಟನ್ನು ಜ್ಞಾಪಿಸಿಕೊಂಡನೋ ಏನೋ—ನಗುವಿನ ಛಾಯೆ ಅವನ ಮುಖದ ಮೇಲೆ ಆಡಿತು.

"ನೋಡ್ರೋ! ಅವನ ಮುಖ" ಅಂತ ನಮ್ಮೆಲ್ಲರ ಗಮನವನ್ನೂ ಅತ್ತ ಸೆಳೆದ.

* * *

ಮಳೆ ಹುಳುಗಳು ದೀಪದ ಸುತ್ತಾ ಥಂಡ ಥಂಡವಾಗಿ, ತಂಡ ತಂಡವಾಗಿ ಹಾರಾಡಲು ಆರಂಭಿಸಿದ್ದುವು. ಅವುಗಳ ಕಾಟದಲ್ಲಿ ನಮಗೆ ಬಾಯಿಬಿಡುಕ್ಕೇ ಹೆದರಿಕೆ. ಸೇವಕನನ್ನು ಕರೆದು ನಮ್ಮ ಮೇಜಿನ ಮೇಲಿದ್ದ ದೀಪ ಆರಿಸು ಎಂದು ಹೇಳಿದೆವು.

ಮೇಜಿನ ಸುತ್ತ ನಾಲ್ಕು ಕುರ್ಚಿಗಳಲ್ಲಿ ನಾವು ನಾಲ್ವರಿದ್ದೆವು ಯಥಾಪ್ರಕಾರ, ನಾನು, ಕುಳ್ಳೈಂಗಾರಿ, ಘುಟು ಮತ್ತು ನಾಮಿ. ಐದನೇ ಕುರ್ಚಿ, ಕಂಬದ ಎದುರಿಗಿದ್ದುದು ಎಂದಿನಂತೆ ಕೊರವನಿಗೆ ಮೀಸಲು. ಆದರೆ ಆ ರಾತ್ರಿ ಅದು ಖಾಲಿ, ಅಲ್ಲಿನತನಕ.

ಹೊಸ ಸದಸ್ಯ ಅಂತ ಕಾಣುತ್ತೆ, ಸುಲಭವಾಗಿ ಹಣ ಸಂಪಾದಿಸಿದವ-ಆಯ್ಕೆ ಮಾಡಿ ತಂದೆ ತಾಯಿಯರನ್ನು ಪಡೆದ ಮೂಲಕ—ಅಂತ ತೋರುತ್ತೆ—ಎಳೆಗರು—ಕ್ಲಬ್ಬಿನ ಸದಸ್ಯರ ಸ್ನೇಹಕ್ಕೆ ಕಾತುರನಾಗಿದ್ದ ಅಂತ ಎನ್ನಿಸಿತು, ಅವ ಬಂದು, ನಮ್ಮ ಸ್ನೇಹ ಬೆಳೆಸಲು, ಆ ಕೊರವನ ಕುರ್ಚಿಯ ಮೇಲೇ ಕೂತ. "ಹಲ್ಲೋ" ಎಂದ ಕಿವಿಯಿಂದ ಕಿವಿತನಕ ನಗುವಿನ ಜೋಮಾಲೆ ಹಾಕಿಕೊಂಡು. "ಗುಂಡ ನನ್ನ ಹೆಸರು" ಎಂದ.

ಈಗ ಕೊರವ ಬಂದರೆ ಏನಪ್ಪಾ ಗತಿ? ಎಂದು ನಾವು ನಾಲ್ವರೂ ಅಂದುಕೊಂಡೆವು. ಅಷ್ಟರೊಳಗೇ ಕೊರವೇ ಬಂದೇಬಿಟ್ಟ. ಅರ್ಧಂಬರ್ಧ ಕತ್ತಲೆಯಾದ ಆ ಮೇಜಿನ,. ಆ ಕುರ್ಚಿಯ ಹತ್ತಿರ ಬಂದು ಅಲ್ಲಿಯೇ ನಿಂತ.

ಜಕಣಾಚಾರಿ ಕಡೆದ ಶಿಲಾ ಮೂರ್ತಿಯಂತೆ ನಿಂತ.

ಶ್ರೀ ಗುಂಡ ನಿನಗೆ ಗೊತ್ತೆ ಕೊರವ, ಅಂತ ನಾನು ಶುರುಮಾಡಿದೆ. ಗುಂಡ ಎದ್ದು ನಿಂತು, "ಹಲ್ಲೋ! ಐ ಯಾಮ್ ಗುಂಡ್ ಪ್ಲೀಸ್ಡ್ ಟು ಮೀಟ್ ಯು" ಎಂದು ಫ್ರೆಂಚಿನವರು ಇಂಗ್ಲೀಷ್ ಆಡಿದಂತೆ, ಕನ್ನಡ ದೇಶದಲ್ಲಿ, ಹೇಳಿದ.

ಕೊರವ ಕ್ರೂರವಾಗಿ ನೋಡಿ "ನಿನ್ನ ನೋಡೇ ನಿನ್ನ ಹೆಸರು ಅರ್ಥವಾಯಿತು ಮಗನೇ! ನೀನು ಶ್ಯಾಮರಾಯನ ದತ್ತುಮಗ ಅಲ್ಲವೇ?" ನಿನಗೆ ನಮ್ಮ ಕೋಣನೂರು ಕಾಮಾಕ್ಷಿ ಕೊಟ್ಟು ಮದುವೆಯಾಗಲಿಲ್ಲವೇ? ನಿನ್ನನ್ನ ಮನೆಯಲ್ಲಿ ಪುಟ್ಟಗುಂಡು ಅಂತಲ್ಲವೇ ಕರೆಯೋದು? ನಿಮ್ಮ ಚಿಕ್ಕಪ್ಪ ದೊಡ್ಡ ಗುಂಡೂರಾಯ ಅಲ್ಲವೇ? ಕೂತುಕೋ ಇಲ್ಲೇ ಕೂತುಕೋ ಈ ದುಷ್ಟ ಚತುಷ್ಟಯಕ್ಕೆ ನಿನ್ನ ಪ್ರವರ, ಗೋತ್ರ ಎಲ್ಲಾ ಹೇಳಿ ನಿನ್ನ ಪರಿಚಯ ಮಾಡಿಸಿಕೊಡುತ್ತೇನೆ, ಆ ಪಾಂಡಿಚೇರಿ ಇಂಗ್ಲೀಷಿಗೆ ತುಂಡುಹಾಕು. ಬೆಂಗ್ಳೂರು ಕನ್ನಡ ಮಾತಾಡು ಸೊಳ್ಳೆ ಪರದೆ ಒಳಗಡೆ ಮಾತಾಡೋ ಅಚ್ಚ ಕನ್ನಡ ಬಿಚ್ಚಿ ಮಾತಾಡು ಇವರಿಗೆಲ್ಲಾ ಅರ್ಥವಾಗುತ್ತೆ" ಎಂದ.

ಗುಂಡ್ ಮುಖ ಕೋಲಾಗಿತ್ತು.

ಅದನ್ನು ನೋಡಿ ಕೊರವ ಮುಂದುವರೆದ ನಮ್ಮನ್ನು ಕುರಿತು.

"ಈ ಎಳೆಗರು ನನ್ನ ಸ್ನೇಹಿತನ ದತ್ತುಪುತ್ರ. ಈಗ ಕರುವಿನಂತೆ ಹಾರಾಡುತ್ತಿದೆ. ಆದರೆ ಕೋಣನೂರು ಕಾಮಾಕ್ಷಿ ಬಲು ಜಾಣೆ. ಒಂದು ದಿನ ಇವ ಎತ್ತು ಆಗಿಯೇ ಆಗುತ್ತಾನೆ. ಆಗ ನಮ್ಮಲ್ಲಿ ಒಬ್ಬನಾಗಿಯೇ ಆಗುತ್ತಾನೆ. ಸ್ವಲ್ಪ ಕಾಲ ಬೇಕು ಅಷ್ಟೇ ನಮ್ಮಂತಾಗಲು"

"ಏನು ಕುಡೀತೀ ಗುಂಡೂರಾಯ, ಎಳೆನೀರೆ, ನಿಂಬೇ ಪಾನಕವೇ ಅಥವಾ ನೀರುಮಜ್ಜಿಗೆಯೋ" ಎಂದ

"ತಣ್ಣಗಿರುವ ನೀರು" ಎಂದು ಬಿಕ್ಕಳಿಸಿದ ಗುಂಡ್.

* * *

"ವಾರೆ ರುಮ್ಮಾಲಿನವ"

— — o

ಕೆಂಪು ಜರಿಯ ವಾರೆ ರುಮ್ಮಾಲ ಸುತ್ತಿಕೊಂಡಾವ ಬಂದು ನನಗೊಂದು ಲಕ್ಕೋಟೆಯನ್ನು ಕೊಟ್ಟ. ಜಂತದ ನುಣುಪು ಆ ಲಕ್ಕೋಟಿಗೆ. ನನ್ನ ಹೆಸರು ವಿಳಾಸ ಅಚ್ಚೊತ್ತಿದಂತೆ ಗುಂಡಾಗಿ ಬರೆಯಲ್ಪಟ್ಟಿತ್ತು. ಮೇಲಾಗಿ ಸುವಾಸನೆ ಲಕ್ಕೋಟಿ ನನಗೆ ಇಳಿವಯಸ್ಸಾದರೂ ಕೂಡ ಆಶೆ ಚಿಗುರುತ್ತಲೇ ಇದೆ. ಯಾರು ಬರೆದಿರಬಹುದು. ಈ ಪ್ರೇಮ ಸಂದೇಶವನ್ನು ತಂದ ಕೆಂಪು ವಾರೆ ರುಮ್ಮಾಲಿನವ ಯಾವ ಊರಿಂದ ಬಂದಿರಬಹುದು. ಅಕ್ಷರ ನೋಡಿದರೆ ಹೆಣ್ಣು ಕಳೆಯಿದೆ ವಾಸನೆ ನೋಡಿದರೆ ಯೌವನ ಕಾಣಬರುತ್ತಿದೆ. ಅಂದ ನೋಡಿದರೆ ಶ್ರೀಮಂತಿಕೆ ಎದ್ದು ಕಾಣುತ್ತಿದೆ ಅಂದಮೇಲೆ ಯಾರೋ ಆಗರ್ಭ ಶ್ರೀಮಂತಿನಿ ನನ್ನ ಆಕಾಶವಾಣಿ ದನಿಯನ್ನು ಕೇಳಿ ಮೋಹಗೊಂಡು, ಈ ರೀತಿ ಪ್ರೇಮಪತ್ರ ಬರೆದಿರಬಹುದೋ ಎಂದೆ ಆಶೆ ಹೇಳಿತು. "ಹಾಗಲ್ಲಾ ಮಗನೇ ಹಳೇ ಬಾಕೀಗೆ ಅಥವಾ ಚಂದಾ ಎತ್ತೋದಕ್ಕೆ ಈ ಗಡಪಾರೆ ಹಾಕ್ತಾ ಇದಾರೆ ಯಾರೋ" ಎಂದು ಬುದ್ಧಿ ಹೇಳಿತು.

ಇರಲಿ, ಕಾಗದ ಒಡೆದು ಓದಿದರೆ ತಿಳಿದೇ ತಿಳಿಯುತ್ತೇ ಎಂದು. ಕೆಂಪು ಜರಿಯ ವಾರೆ ರುಮ್ಮಾಲಿನವನನ್ನು ಕೂರಿಸಿ, ಲಕ್ಕೋಟೆಯನ್ನು ಅಹಿಂಸಾ ಮಾರ್ಗದಿಂದ ಹರಿದು, ಕಾಗದ ಓದಿದೆ.

ಶ್ರೀಯುತರೇ, ಈ ಕಾಗದ ತರುವವ ಬಲು ಶಹಣೆ ಇದ್ದಾನೆ. ಮುಖ ನೋಡಿ ಜಾತಕ ಬರೆಯುತ್ತಾನೆ. ಜಾತಕ ನೋಡಿ ನಿಮ್ಮ ಭವಿಷ್ಯ ಹೇಳಾನು, ಅವನು ಹೇಳಿದ್ದು ನಡೆದೇಹೋಗುತ್ತೆ. ಇತಿ ನಿಮ್ಮ ಹಳೆಯ ಶಾಲಾ ಸ್ನೇಹಿತ. ಗೋವಿಂದರಾಯ ಎಂದು ಬರೆದಿತ್ತು.

ಗೋವಿಂದರಾಯ ಕಾಲೇಜಲ್ಲಿ ಓದುವಾಗ್ಗೆ ವಾರಕ್ಕೆ ನಾಲ್ಕು ದಿನ ನನಗೆ ಒಂದುಹೊತ್ತು ಅನ್ನದಾತ. ಬಲು ಧಾರಾಳಿಯಾದ ಶ್ರೀಮಂತ. ಅದಕ್ಕನುಸಾರವಾಗಿ ಭಗವಂತ ಆತನಿಗೆ ಬೊಂಬಾಯಿನಲ್ಲಿ ದೊಡ್ಡ ಹುದ್ದೆ ಕೊಡಿಸಿದ್ದ. ಆತನ ಕಾಗದ ಅಂದರೆ ನನಗೆ ಶ್ರೀಮುಖದಂತೆ. ಆದರೆ ನಾನು ಒಡಪಾಯಿ. ಕ್ಲಬ್ಬೊಂದರ ಕಾರ್ಯದರ್ಶಿಯಾಗಿ ಜೀವನ ನಡೆಸುತ್ತಿದ್ದೆ. ಗೋವಿಂದರಾಯನಿಗೆ ಅನ್ನಿಸಿರಬಹುದು:—"ನನ್ನ ಸ್ನೇಹಿತನಿಗೆ ಕಾಗದ ಬರೆದರೆ ಆತ ಕ್ಲಬ್ಬಿನ ಕೊಬ್ಬಿದ ಸದಸ್ಯರಿಗೆ ಈತನ ಪರಿಚಯ ಮಾಡಿಕೊಡುತ್ತಾನೆ. ಅಂದಮೇಲೆ ಮುಖ ನೋಡಿ ಭವಿಷ್ಯ ಹೇಳುವವನ ಭವಿಷ್ಯ ನೆಟ್ಟಗಾದೀತು" ಎಂದು.

ಆದರೆ ನನಗೆ ಗೊತ್ತು. ಕ್ಲಬ್ಬಿನ ಸದಸ್ಯರು ನನ್ನ ಮಾತನ್ನು ಯಾವ ವಿಷಯದಲ್ಲಿ ಕೇಳುತ್ತಾರೆ ಎನ್ನುವುದು. ಈ ವಿಷಯ ಅವುಗಳಲ್ಲಿ ಒಂದಲ್ಲಾ ಎನ್ನುವುದು. ಏನು ಮಾಡುವುದು? ಗೋವಿಂದರಾಯನ ಸಲುವಾಗಿ ಈತನಿಗೆ ನನ್ನ ಮುಖವನ್ನೇ ತೋರಿಸಿ ಆತ ಕೇಳಿದ ದಕ್ಷಿಣೆಯನ್ನು ಕೊಟ್ಟು ಕೈ ತೊಳೆದುಕೊಳ್ಳುವುದು ಎಂದು ನಿರ್ಧರಿಸಿದೆ.

ನಾಳೆ ಮಧ್ಯಾಹ್ನ ನಮ್ಮನೆಗೆ ಬಾ ಎಂದು ಆತನಿಗೆ ಆಹ್ವಾನ ಕೊಟ್ಟು ಕಳಿಸಿದೆ.

ಮನೆಗೆ ಬಂದ ಕೂಡಲೆ ಮಡದಿಗೆ ಹೇಳಿದೆ "ಲೇ! ಈವತ್ತು ಗೋವಿಂದರಾಯನ ಕಡೆಯವನೊಬ್ಬ ಈ ರೀತಿ ಬಂದಿದ್ದ. ನಾಳೆ ಮಧ್ಯಾಹ್ನ ಬರಹೇಳಿದ್ದೇನೆ. ಒಂದಿಷ್ಟು ಉಪ್ಪಿಟ್ಟು ಬೋಂಡ ಕಾಫಿ ಕೊಟ್ಟು ದಕ್ಷಿಣೆ ಕೊಡೋಣ. ಆಗ ದಕ್ಷಿಣೆ ಕಡಿಮೆಯಾದರೂ ಅವನ ಮನಸ್ಸು ಹಿಗ್ಗುತ್ತೆ, ಅವ ಹಿಂತಿರುಗಿದ ಮೇಲೆ, ಗೋವಿಂದರಾಯನಿಗೆ ಈ ವಿಷಯ ಹೇಳಿದಮೇಲೆ ಆತ ಭಲೇ! ಎನ್ನುತ್ತಾನೆ" ಎಂದು :

"ಸರಿಹೋಯ್ತು! ನಿಮ್ಮ ಭವಿಷ್ಯ ಹೇಳುಕ್ಕೆ ಆತ ಬರಬೇಕೇ? ನಾನೇ ಹೇಳ್ತೀನೆ ಕೇಳಿ! ನಂಗೇ ಕೊಡಿಸಿ ಉಪ್ಪಿಟ್ಟು ಬೋಂಡ ಕಾಫೀನ, ಅಥವಾ ಅದರ ಮೌಲ್ಯವನ್ನ ಇದಕ್ಕೆ ಗೋವಿಂದರಾಯರ ಸಾಕ್ಷ್ಯ ಬೇರೇ" ಎಂದು ಮಡದಿ ಮಡಗಿದಳು.

"ಗೋವಿಂದರಾಯರ" ಎಂದಾಗ ಅವಳಿಗೂ ಗೊತ್ತು, ನನ್ನ ಮತ್ತು ಗೋವಿಂದರಾಯನ ಸಖ್ಯ ಎಂದು ಅರ್ಥವಾಯಿತು. ರೇಗಿದ ಅರ್ಧಾಂಗಿ ಹೇಳಿದ ಮಾತನ್ನು ಯಾವ ಅರ್ಧಾಂಗ ತಾನೇ ನಂಬುತ್ತಾನೆ.

ಸರಿ! ಕಣೆ ಹಾಗಾದರೆ ಮಧ್ಯಾಹ್ನ ನಾಲ್ಕು ಗಂಟೆಗೆ ಆತನನ್ನು ಕರೆದು ತರುತ್ತೇನೆ, ಅಂದ ಹಾಗೇ ಮೆಣಸಿನ ಪುಡಿ ಸಾಸಿವೆ ಮೆಣಸು ಇದನ್ನೆಲ್ಲಾ ಇಡಲು ಡಬ್ಬಗಳು ಬೇಕು ಅಂದಿದ್ದೆಯಲ್ಲಾ, ಅವನ್ನು ತರುತ್ತೇನೆ, ಒಂದೇ ರೀತಿಯಾದ ಭದ್ರವಾದ ಮುಚ್ಚಳ ಇರುವ ಒಂದು ಡರ್ಜ ಡಬ್ಬಗಳನ್ನು ನೋಡಿಟ್ಟಿದೇನೆ ನಾಳೆ ಬರುವಾಗ ತರುತ್ತೇನೆ" ಎಂದೆ.

ಬಾಯಿನ ತುದಿಗಳು ಕಿವಿಗಳ ತನಕ ಹರಡಿದ್ದನ್ನು ನೋಡೇ ಕೃತಕಾರ್ಯನಾದೆನೆಂದು ತಿಳಿದೆ.

ಈ ಹೆಂಗಸರಿಗೆ ಅವರು ಬಯಸಿದ ಡಜನ್ ಡಬ್ಬಾ ಕೊಡುವಷ್ಟು ಖುಷಿ, ವಜ್ರದ ಓಲೇನೂ ಕೊಡುಲ್ಲ.

ಮಾರನೆಯ ದಿನ ಮಧ್ಯಾಹ್ನ ಕೆಂಪು ಜರದ ವಾರೆ ರುಮ್ಮಾಲಿನವ ಮನೆಗೆ ಬಂದ. ವರಾಂಡಾದಲ್ಲಿ ಚಪ್ಪಲಿ ಬಿಟ್ಟ ಅಂಗಳದಲ್ಲಿ ಛತ್ರಿ ಇಟ್ಟ. ಒಳಕ್ಕೆ ಬಂದ. ನನ್ನ ಮೊಗ ನೋಡಿ ಜಾತಕ ಬರೆದ. ಅಷ್ಟು ಹೊತ್ತಿಗೆ ಉಪ್ಪಿಟ್ಟು ಬೋಂಡ ಬಂತು. ಅದನ್ನು ತಿನ್ನುತ್ತಾ ನನ್ನ ಭವಿಷ್ಯ ಬರೆದ. ಕಾಫಿ ಬಂತು. ಸೊಗಸಾದ ಗಮಗಮಿ

ಸುವ, ಗುಟುಕು ಕುಡಿದ ಮೇಲೆ ಘಮಘಮಿಸುವ ಕಾಫಿ ಕುಡಿದ. "ರಾಯರೇ! ನೀವು ಹಿಡಿದಿದ್ದು ಹೊನ್ನು. ಲಗ್ನಾಧಿಪತಿ ಕುಜ ಉಚ್ಚನಾಗಿದ್ದಾನೆ. ನೀವು ಒಂದು ಕೊಟ್ಟರೆ ಎರಡು ನಿಮಗೆ ದೊರಕುತ್ತದೆ. ಹತ್ತು ಕೊಟ್ಟರೆ ಇಪ್ಪತ್ತು. ಸಾವಿರ ಕೊಟ್ಟರೆ, ಎರಡು ಸಾವಿರ. ಹಾಗಿದೆ ನಿಮ್ಮ ಪುಣ್ಯ. ಬಿಡುಗೈಯಿಂದ ಕೊಡಿ. ಎರಡರಷ್ಟು ನಿಮಗೆ ಭಗವಂತಾ ಕೊಡುತ್ತಾನೆ" ಎಂದು ಭವಿಷ್ಯ ಹೇಳಿದ, ಮೀಸೆ ಒರೆಸಿಕೊಳ್ಳುತ್ತಾ.

ಒಂದು ತಟ್ಟೆಯಲ್ಲಿ ವೀಳೆದೆಲೆ ಅಡಿಕೆ ತೆಂಗಿನಕಾಯಿ ತಂದಳು ನನ್ನ ಅರ್ಧಾಂಗಿ. ಹತ್ತಿರದಲ್ಲಿದ್ದ ಮೇಜಿನಮೇಲಿಟ್ಟ ನಂತರ ಹಿಂತಿರುಗಿ ನಡೆದುಹೋದಳು. ಅವಳು ನಡಿಗೆಯಲ್ಲೇ ತನ್ನ ಮನೋಗತವನ್ನು ತೋರಿಸುವ ಸಾಹಸಿ ಕಾಲಂದಿಗೆಯ ಝುಣ ಝುಣವು ಆಕೆಯ ಮನೋಗತವನ್ನು ಸೂಚಿಸುವುದು ನನಗೆ ಬಲು ದಿನದಿಂದ ಕಂಡ ಸತ್ಯ. "ಝುಣ್....ಝುಣ್... ಝುಣ್....ಝುಣ್....ಎಂದು ನಾಲ್ಕು ತಾಳಕ್ಕೊಮ್ಮೆ ಝುಣಿಸಿದರೆ ಕೇವಲ ಯೋಗಿ ಎಲ್ಲಿ ಏನಾದರೂ ನಿರ್ಲಿಪ್ತಳು ನಾನು ಎಂದು ಸೂಚಿಸುವ ತಾಳ

ಝುಣ ಝುಣ.....ಝುಣ ಝುಣ.... ಎಂದರೆ ನನಗೆ ಕೋಪ ಬರುತ್ತಿದೆ, ದುರ್ಗಿಯಾಗುವ ಕಾಲ ಬಂದಿದೆ ಹುಷಾರ್ ಎನ್ನುವ ಎಚ್ಚರಿಕೆ.

ಝಣ್ ಝಣ...ಝಣ್ ಝಣ್...ಝಣ್ ಝಣ...ಝಣ್ ಝಣ್... ಎಂದರೆ ನೀವು ಇಂದು ಏನು ಮಾಡಿದರೂ ತಪ್ಪಿಲ್ಲ. ಎಲ್ಲವನ್ನು ಕ್ಷಮಿಸುವ ಧರಿತ್ರೀ ನಾನು, ಎಂದೆನ್ನುವ ಕ್ಷಮಾ ಮೂರ್ತಿಯ ಸಂಕೇತ.

ಈ ಮಧ್ಯಾಹ್ನ ಝಣ ಝಣ .. .ಝಣ ಝಣ....ಎಂದೆನ್ನುವ ತಾಳಕ್ಕೆ ಹೊರ ಹೊರಟಿದ್ದಳು. ಕೋಪ ಅನ್ನುವುದು ನನಗರ್ಥವಾಯಿತು. ಗೋವಿಂದ ರಾಯನ ಸಖ್ಯವೂ ಈ ಕೋಪವನ್ನು ತಡೆಯಲಾರದಾಯಿತು ಎಂದೂ ಅರ್ಥ ವಾಯಿತು.

ಒಳಗೆ ಹೋಗಿ ಐದು ರೂಪಾಯಿನ ನೋಟೊಂದನ್ನು ತಂದು ಆ ಎಲಡಿಕೆ ತಟ್ಟೆಯಲ್ಲಿಟ್ಟು, ಕೆಂಪು ಜರದ ಪಾರೆ ರುಮ್ಮಾಲಿನವನಿಗೆ ಕೊಟ್ಟೆ. ಆ ಉಪ್ಪಿಟ್ಟು, ಆ ಬೋಂಡ, ಆ ಕಾಫಿ, ತಿಂದ ಆ ಆತ ಆ ವೀಳಯವನ್ನೂ ಸ್ವೀಕರಿಸಿ "ಭಗವಂತ ನಿಮಗೆ ಒಳ್ಳೇದು ಖರೇವು ಮಾಡಾನ್ರೀ, ನಾನ್ ಹೇಳ್ತೀನ್ರೀ" ಅನ್ನುತ್ತಾ ನಗು ನಗುತಾ ಚಪ್ಪಲಿ ಮೆಟ್ಟಿಕೊಂಡು, ದಕ್ಷಿಣೆ ವೀಳೆಯ ತೆಗೆದು ಕೊಂಡು ಹೊರಟೇ ಹೋದ. "ಈ ಸಂಜೆ ಮೈಸೂರಿಗೆ ಹೋಗಾವ ನಿದ್ದೀನ್ರೀ. ಮಹಾರಾಜರನ್ನ ಭೆಟ್ಟಿ ಆಗಲಿಕ್ಕೆ" ಅಂದು ಹೊಂಟೇಹೋದಾನ್ರಿ ಅವ.

ಅವನನ್ನ ಸಾಗ ಗೊಳಿಸಿ ನಾನು ಹಿಂದಕ್ಕೆ ಬಂದಾಗ ವರಾಂಡಾದಲ್ಲಿ, ಅಂಗಳ ದಲ್ಲಿ, ನನ್ನ ಹಜಾರದಲ್ಲಿ ನಾನೊಬ್ಬನೇ. ಬಂದೆ. ಕುಳಿತೆ ಕುರ್ಚಿಯ ಮೇಲೆ.

ಝುಣ್ ಝುಣ . . . ಝುಣ್ ಝುಣ . . . ಝುಣ್ ಝುಣ . . . ಝುಣ್ ಝುಣ . . .


ಈ ತಾಳಕ್ಕೆ ಸರಿಯಾಗಿ ಕಾಲಂದಿಗೆಯ ತಾಳ ಹಾಕುತ್ತಾ ಅರ್ಧಾಂಗಿ ಬಂದಳು. ಬಲ ಕೈಯಲ್ಲಿ ಒಂದು ಬಟ್ಟಲು ಘಮ ಘಮಿಸುವ ಕಾಫೀ! ಎಡಗೈಯಲ್ಲಿ ಹೊಸಾ ಹೊಸ ಅಳಿಯನಿಗೆ ಕೊಡುವ ತರಹ ಛತ್ರಿ!!—ಕೇವಲ ಕ್ಷಮಾಮೂರ್ತಿವೆತ್ತ ಹೆಣ್ಣು ಎದುರಿಗೆ.

“ಏನೇ!” ಇದರ ಮರ್ಮ ಎಂದು, ನೋಡಿದೆ.

“ಆತ ಹೇಳಲಿಲ್ಲವೇ! ದಿಟವಾಗಲೂ ಆತ ಭವಿಷ್ಯ ಹೇಳೋನೇ ಸರಿ! ಒಂದು ಕೊಟ್ಟರೆ ಎರಡು ಬರುತ್ತೆ ನಿಮಗೆ ಅಂದ ಅಲ್ಲವೇ? ದಿಟಾ! ಅಂದ್ರೆ ಅದು ನೀವು ಐದು ರೂಪಾಯಿ ಕೊಟ್ಟಿರಿ. ಆತ ಹತ್ತು ಹನ್ನೆರಡು ರೂಪಾಯಿನ ಈ ಛತ್ರಿಯನ್ನು ನಮ್ಮ ಅಂಗಳದಲ್ಲೇ ಮರೆತು, ನಮಗೇ ಅಂತ ಬಿಟ್ಟು ಹೊರಟೇ ಹೋದ. ಇನ್ನು ಮೇಲೆ ನೀವು ಒಂದು ಕೊಡಿ. ಭಗವಂತ ಎರಡು ಮಡಗ್ತಾನೆ ಅಂತ ನನಗೆ ಖಂಡಿತ ವಾಯ್ತು ಅಂತ ಅಂದಳು ನನ್ನ ಅರ್ಧಾಂಗಿ.

ಒಂದು ಕೊಟ್ಟೆ ಆಕೆ ಎರಡು ಮಡಗಿದಳು.

—ಕುಮಾರ್.



ನ್ಯಾಯಾಧೀಶ:—

ಬೆಂಗಳೂರು ಜೈಲಿನಲ್ಲಿ ಹಿತವಾಗಿರೋಣ ಅಂತಿದೀಯೇನೋ!
ನಿನ್ನನ್ನು ಬಳ್ಳಾರಿ ಜೈಲಿನಲ್ಲಿ ಬೇಯಲು ಕಳಿಸುತ್ತೇವೆ ಹುಷಾರ್!!

ತಿಪ್ಪಯ್ಯನ ರಸ ನಿಮಿಷ

ಪಾರ್ಕಿನ ಹುಲ್ಲ ಮೇಲೆ ಕುಳಿತು ಸ್ನೇಹಿತರು ತಮ್ಮ ಜೀವನದ ರಸ ನಿಮಿಷ ಗಳನ್ನು ಹೇಳಿಕೊಳ್ಳುತ್ತಿದ್ದರು. ಈಗ ತಿಪ್ಪಯ್ಯನ ಸರದಿ—

"....ಆವೊತ್ತು ರೈಲಿಳಿಯುವಾಗ ಅಪ್ಪಲಾಪುರಕ್ಕೆ ಹೋಗುವ ಬಸ್ಸು ಸ್ಟೇಷನ್ನಿನಲ್ಲಿ ಕಾದು ನಿಂತಿತ್ತು. ಅದನ್ನ ಕಂಡು ನನ್ನ ಮೈ ನಡುಗಿತು. ಫೋರ್ಡನ ಚೊಚ್ಚಲ ಸಂತಾನವೆಂಬಂತಿತ್ತು ಅದು. ಆದರೆ ಅಪ್ಪಲಾಪುರ ತಲಪಲು ನಮಗೆ ಬೇರೆ ಗತಿಯಿದೆಯೆ ? ಆದದ್ದಾಗಲಿ ಎಂದು ಆ ತರಕಟಾಲ್ ವಾಹನವನ್ನೇರಿದೆ. ಹತ್ತಿಪ್ಪತ್ತು ಮಂದಿ ಜೊತೆಗಿದ್ದರೆನ್ನಿ.

"ಧಿಗ್ಗೆಂದು ಭುಗ್ಗೆಂದು ಭೂಂಕರಿಸಿ ಹೊಗೆಯುಗುಳಿ ಹಿಂದಕ್ಕೆ ತೆವಳಿ ಥಟ್ಟನೆ ಮುಂದಕ್ಕೆ ನೆಗೆದು ಅದು ಹೊರಡುವ ಹೊತ್ತಿಗೆ ಆ ಮುಂಜಾನೆಯ ಚಳಿಯಲ್ಲಿಯೂ ಬೆವರು ಕಿತ್ತುಕೊಂಡಿತು. ಕೆಲವರು ನಡುಗಿದರು. ನನಗೆ ಹಸಿವುಂಟಾಯಿತು. ರಸ್ತೆಯಲ್ಲಿ ನೆರೆದಿದ್ದ ಹಸು, ಹೋತ, ಕತ್ತೆ, ಕಾಲಾಳುಗಳನ್ನೆಲ್ಲ ಛಂಗನೆ ನೆಗೆಸಿ ದಾರಿ ಬಿಡಲು ಒಪ್ಪದಿದ್ದ ಮಹಿಷದ್ವಯಗಳನ್ನು ನಿಧಾನವಾಗಿ ಪಕ್ಕಕ್ಕೆತಳ್ಳಿ ನಮ್ಮ ರಥ ಮುಂದುವರಿಯಿತು.

"ಅನಂತರ ಐದೇ ಗಂಟೆಗಳಲ್ಲಿ ಹದಿನೇಳು ಮೈಲಿ ಸಾಗಿದೆವು. ಈ ನಡುವೆ ಬಸ್ಸು ನಿಂತಿದ್ದು ಕೇವಲ ಎಂಟು ಸಾರಿ. ನಾವು ಕೆಳಗಿಳಿದು ತಳ್ಳಬೇಕಾಗಿ ಬಂದದ್ದು ಆರೇ ಸಲ. ದಾರಿಯಲ್ಲಿ ಚಿಗಿತ ನೆಗೆತ ಜಂಪು ಜರ್ಝರಗಳಿಂದುಂಟಾದ ಚಿಲ್ರೆ ಪಲ್ರೆ ಗಾಯಗಳಿಗೂ, ತಲೆ ನೋವು ಎದೆ ನೋವುಗಳಿಗೂ ಬಸ್ಸಿನಲ್ಲಿದ್ದ ಡಾಕ್ಟರೇ ಚಿಕಿತ್ಸೆ ನಡೆಸಿದರು. ಅವರು ಪ್ರತಿನಿತ್ಯ ಅದೇ ಬಸ್ಸಿನಲ್ಲಿ ಪ್ರತಿನಿತ್ಯ ಅಪ್ಪಲಾಪುರಕ್ಕೆ ಹೋಗಿ ಬರುವವರು "ಏನು ಸ್ವಾಮಿ ಗಂಟೆ ಈವಾಗಲೆ ಹನ್ನೆರಡಾಯಿತು. ಇನ್ನು ನೀವು ಷಾಪ್ ತೆರೆಯೋದು ಯಾವಾಗ?" ಎಂದು ಕೇಳಿದ್ದಕ್ಕೆ ಆತ "ಷಾಪ್ ತೆರೆವರೆ ತೆರೆದೆ, ಇಲ್ಲವಾದರೆ ಇಲ್ಲ. ಇದೇ ಬಸ್ಸಿನಲ್ಲಿ ಹಿಂದಿರುಗುತ್ತೇನೆ" ಎಂದರು. ನಾನು ಬೆರಗಾಗಿ "ನಿಮ್ಮ ಪ್ರಾಕ್ಟಿಸ್....?" ಎಂದು ಕೇಳಿದೆ. "ಹ ಹ್ಹ ಹ್ಹ ಅದು ಈ ಬಸ್ಸಿನ ಮೇಲೆಯೆ!"—ಎಂದರು ಡಾಕ್ಟರು.

"ಸೊಗಸಾಗಿದೆ ಸೊಗಸಾಗಿದೆ" ಎಂದರು ಖಾರದವಲಕ್ಕಿ ಮುಕ್ಕುತ್ತಿದ್ದ ಗೆಳೆಯರು. ಗೋಡಂಬಿ ಚೂರುಗಳನ್ನೇ ಹೆಕ್ಕಿ ಬಾಯಿಗೆ ಹಾಕಿಕೊಳ್ಳುತ್ತ ತಿಪ್ಪಯ್ಯ ಮುಂದುವರಿಸಿದ.

"ಅಪ್ಪಲಾಪುರಕ್ಕೆ ಇನ್ನುಳಿದಿರುವುದು ಎರಡೇ ಮೈಲಿ ಎನುವಾಗ ಟಯರು ಕೈಕೊಟ್ಟಿತು. ಕುಯ್ಯೋ ಎಂದು ಚೀರಿತು. ದೇಹ ಮುಳ್ಳಾಗಿದ್ದರೂ ಮಾವನ ಮನೆ ಸಮೀಪಿಸುತ್ತಿದ್ದುದರಿಂದ ಮನಸ್ಸು ಮಲ್ಲಿಗೆಯಾಗಿತ್ತು. ಏನೇನೋ ಕನಸು ಕಾಣುತ್ತಿರುವಾಗಲೇ ಮತ್ತೆ ಉರಿಬಿಸಿಲಿನಲ್ಲಿ ಕೆಳಗಿಳಿಯಬೇಕಾಯಿತು. ಬಸ್ಸು ಥಟ್ಟನೆ ನಿಂತಿದ್ದರಿಂದ ನಮ್ಮಲ್ಲಿ ಟೋಪಿಯಿಲ್ಲದವರ ತಲೆಗಳು ಚಾಪನ್ನ ಮುದ್ದಿಟ್ಟು ಉರಿತಂದುಕೊಂಡಿದ್ದವು. ತಲೆಗೆ ಬಿಸಿಲು ತಗಲಿದಾಗ ಅಪೂರ್ವ ಅನುಭವಗಳುಂಟಾಗತೊಡಗಿದುವು.

ಸಾರಥಿ ತನ್ನ ಸಾಮಾನುಗಳೊಡನೆ ಬಸ್ಸಿನಡಿ ತೂರಿಕೊಂಡು ಶಾಖಾಯ ಲವಣಾಯ ಮಾಡಿ "ಹುಂ ಕೊಂಚ ತಳ್ಳಿ" ಎಂದು ಆರ್ಭಟಿಸಿದಾಗ ನಾವು ಕಚ್ಚೆ ಕಟ್ಟಿದೆವು. ಆಯಾಸ ಪರಿಹಾರಕ್ಕಾಗಿ ನಾವಾಗಲೇ ಕಲಿತುಕೊಂಡಿದ್ದ "ಮೆಂತ್ಯದ ದೋಸೆ ಐಸಾ, ಮಂಡ್ಯದ ಬೆಣ್ಣೆ ಐಸಾ, ಅಪ್ಪಲಾಪುರ ಐಸಾ, ತುಫಾನ್ ಎಕ್ಸ್‌ಪ್ರೆಸ್ ಐಸ್ ಐಸಾ"—ಎಂಬ ಸಾಮೂಹಿಕ ಸಂಗೀತದೊಡನೆ ಕಾರ್ಯಾರಂಭವಾಯಿತು. ತುಫಾನ್ ಎಕ್ಸ್‌ಪ್ರೆಸ್ ಎಂದೊಡನೆ ಅದನ್ನ ಸಂಪೂರ್ಣ ಅವಲೋಕಿಸುವ ಹಂಬಲು ಮೂಡಿ ಬಸ್ಸಿನ ಮುಂದುಗಡೆ ಹೋಗಿ ನಿಂತು ಕ್ಷಣಕಾಲ ಅದರ ಮೂತಿಯನ್ನು ದಿಟ್ಟಿಸಿದೆ. ಅದರ ಹಣೆಬರಹವನ್ನೋದಿದೆ. ಎಂಥ ನಾಮಧೇಯ! ಹಾಯ್, ರಸ ನಿಮಿಷವೇ ಸರಿ! ಆನಂದಾತಿಶಯದಿಂದ ಮೂರ್ಛೆ ಹೋದೆ ..."

"ಏನು ಹೆಸರಯ್ಯ ಅದು....ಅವಲಕ್ಕಿ ಮುಗಿಯುತ್ತೆ ಬೇಗ ಹೇಳು"—ಎಂದು ಗೆಳೆಯರು ತಿಪ್ಪಯ್ಯನನ್ನ ತಿವಿದರು.

"ಕೊಂಚ ಕೇಳಿ....ನನಗೆ ಎಚ್ಚರವಾದಾಗ ಮಾವನ ಮನೆಯಲ್ಲಿದ್ದೆ. ಅಳಿಯನ ಕೋಣೆಯಲ್ಲಿ ಕಣ್ಣು ತೆರೆದೆ. ಆಕೆ ಕುಳಿತಿದ್ದಳು ಪಕ್ಕದಲ್ಲಿ. ಹಿಗ್ಗಿ ಮಂದಹಾಸ ಸೂಸಿದಳು. ಕೈಬೆರಳುಗಳು ಹಣೆಯನ್ನು ನೇವರಿಸಿದವು. "ಆ 'ಬ್ರಹ್ಮಾನಂದ' ಬಸ್ಸು ಶುದ್ಧ ದರಿದ್ರಾಂದ್ರೆ. ಮೊದಲೆ ತಿಳಿಸಿದ್ರೆ ಗಾಡಿ ಕಳುಹಿಸುತ್ತಿದ್ದರಲ್ಲ" —ಎಂದಳು.

ಅದನ್ನೇ ಇನ್ನೊಮ್ಮೆ ಹೇಳು ಅಂದೆ.

ಆಕೆ ಹೇಳಿದಳು "ಆ ಬಹ್ಮಾನಂದ ಬಸ್ಸು ಶುದ್ಧ ದರಿದ್ರ".

"ರೈಟೋ ...ಇನ್ನೊಮ್ಮೆ...."

ಮೂರನೆಯ ಸಲವೂ ಹೇಳಿದಳು. ಬಿದ್ದು ಬಿದ್ದು ನಗತೊಡಗಿದಾಗ . ಹುಂ ಮೂರೂ ಬಹುಮಾನಗಳನ್ನು ಕೊಟ್ಟೆ"

ಖಾರದವಲಕ್ಕಿ ಮುಗಿದಿತ್ತು. ಆದರೆ ಗೆಳೆಯರ ಕಣ್ಣು ಮೂಗುಗಳಲ್ಲಿ ಬರೇ ಖಾರ ನೀರು. ಆ ರಸ ನಿಮಿಷದಲ್ಲಿ ಟವಲುಗಳು ಹೊರಬಂದುವು.

—ರಾಮಕೃಷ್ಣ.

ಬೆಂಗಳೂರು ಬೀದಿಗಳು

"ಬೆಂಗಳೂರು ಪೇಟೆ ನೋಡುವುದಕ್ಕತಿ ಚಂದ.
ಜತೆಗೆ ಅಲ್ಲಿ ಬೀದಿಗಳು! ನೀನೇ ನೋಡು ಕಂದ.

ಹೆಸರುಗಳೋ, ಅವುಗಳದಲ್ಲವೆ ಒಂದು ವಿಚಿತ್ರ.
ಏನು ತರಹ! ಹಣೆ ಬರಹ!" ಎಂದು ನುಡಿದ ನನ್ನ ಮಿತ್ರ.

ಅವೆನ್ಯೂರೋಡು! ಮಾರ್ಕೆಟ್ಟಿಂದ ಮೈಸೂರು ಬ್ಯಾಂಕಿಗೆ
ಎಷ್ಟು ಮರ? ಬೆಟ್ಟೆಣಿಸು.
ಚಿಕ್ಕಪೇಟೆ, ದೊಡ್ಡಪೇಟೆ! ದೊಡ್ಡದು ಯಾವುದು? ಯಾವುದು ಚಿಕ್ಕದು?
ಎರಡು ಅಲ್ಲವೆ ಕಿಷ್ಕಿಂಧ?
ಅಷ್ಟೆ ಅಲ್ಲ, ಇನ್ನೂ ನೋಡು.
ಸರಜು ಸಿಲಕು ಜನಹಿರಿ ತುಂಬಿದ
ಚಿಕ್ಕಪೇಟೆಯೆ ಅಲ್ಲವೆ ಭಾರಿ?
ಬೇರೆ ಕಡೆಯಲಿ ಸಿಕ್ಕದ ಬಳೆಗಳು
ಬಳೇಪೇಟೆಯಲಿ ಸಿಕ್ಕುವುದೇನು, ನೀನೇ ನೋಡು.
ನಗರದ ದಕ್ಷಿಣ ಭಾಗದದಲಲ್ಲವೆ ನಾರ್ತ್‌ರೋಡು!
ಸರ್ವೆಯರ್ ಸ್ಟ್ರೀಟ್? ಸರಿ!
ಬಾಂದು ಗುಡ್ಡೆ ಇಲ್ಲಿ, ಸರ್ವೆ ಆಫೀಸಿಲ್ಲ.

ಬಸವನಗುಡಿಯಲ್ಲಿರುವನು ಬಸವ, ಅಹುದಣ್ಣ.
ವಿಶ್ವೇಶ್ವರಪುರದಲ್ಲಿ? ಸುಬ್ರಮ್ಹಣ್ಯ, ವೆಂಕಟರಮಣ!
ಅಕ್ಕಿಪೇಟೆಯಲಕ್ಕಿ ಇಲ್ಲ, ಅರಳೇಪೇಟೆಯಲ್ಲತ್ತಿ ಇಲ್ಲ!
ಗುಡಿಸಿನೋಡಿ, ತರಗೆಲೆ ರಾಸಿ ಸಿಗುತದೆಎಷ್ಟು
(ಹೊಸತೊ, ಹಳೆಯದೊ, ಆಮೇಲಿರಲಿ)?
ಮಾಮೂಲುಪೇಟೆ! ಕೊಡುವವರಲ್ಲ, ಕೈಯೊಡ್ಡುವರಕಾಣೆ,
ಸಬ್ ರಿಜಿಸ್ಟ್ರಾರ್ ಕಛೇರಿಗಳೇ? ಅಯ್ಯೋ ನನ್ನಾಣೆ!

ಈ ಕವನದಲಂತೂ ರಾಗವು ಇಲ್ಲ ಪ್ರಾಸವು ಇಲ್ಲ.
ಇದೇ ರೀತಿ ಬೆಂಗಳೂರು ಬೀದಿ ಹೆಸರುಗಳಲ್ಲಿ
ಅರ್ಥವೂ ಇಲ್ಲ, ತರ್ಕವೂ ಇಲ್ಲ.

—ಟಿ. ಜಂ.

ಯಾತ್ರಿಕರ ಪತ್ರ

(೫)

"ಚಿಮ್ಮಟಿಗುಂಡಿ" ಹತ್ತಿರ ನಮ್ಮ ಮಾಧು ಸಿಕ್ಕಿದ. ಮಾಧು, ನಂಗೆ ರಾಜಂಗೆ, ಚಂದೀಗೆ, Classmate ಉ. ಲೋಫರ್ ಸೆಕಂಡರೀಲಿ ಬೇರೆ ಯಾದೆವು. ನಾವು ಪೂರ್ವಾರ್ಧವಾಗುಳಿದೆವು. ಮಾಧು ಸೆಕಂಡರೀ ಮುಗಿಸಿ ವೈದ್ಯನಾದ. ಈಗ ಮಾಧು Doctor Madhava Rao! ಆರೋಗ್ಯ ಇಲಾಖೆ. ನಮಗೆ ಮಾಧು ಸಿಕ್ಕಿದಾಗ ಅವನೂ ಅವನ ಜೊತೆಯಲ್ಲಿ ಒಬ್ಬ ಭಂಟ—ಒಂದು ಹಡಪ ಹೊತ್ತು—ಬರುತ್ತಿದ್ದರು. ಎರಡೂ ಕಡೆಯಿಂದ ಬಹಳ ಆದರದಿಂದ ಕುಶಲ ಪ್ರಶ್ನೆಯಾದುವು.

ಕೊನೆಯಲ್ಲಿ ಮಾಧು "ಸರಿ—ನಿಮಗೇನು ತಲೆ ಹೋಗೋ ಕೆಲಸವಿಲ್ಲ. ಬನ್ನಿ ನಂಜೊತೆ—ಒಂದೆರಡು ಹಳ್ಳಿ ಸುತ್ತಿ Head quarters ಗೆ ಹೋಗೋಣ" ಅಂದ.

"ಊಟ?" ಅಂದ ಚಂದಿ.

ಅದಕ್ಕೆ ರಾಜ "ಲೋ ಗುಗ್ಗು—ಮಾಧೂಗೆ ಅಷ್ಟು ಯೋಗ್ಯತೆ ಇಲ್ಲೇನೋ? ಬೆಂಕಿಪುರ ಜ್ಞಾಪಿಸಿಕೊ" ಅಂದ.

ನಾಲ್ಕು ಜನವೂ ಹೊರಟೆವು—ಭಂಟ ಯಥಾಪ್ರಕಾರ. ಹರಟೆಯಲ್ಲಿ ಸ್ವಲ್ಪ ದಾರಿ ಸವೆಯಿತು. ಮಾಧು ತನ್ನ ಭಂಟನ ಕಡೆ ತಿರುಗಿ,

"ಲಿಂಗಾ—ತಲಗೇರಿಗೆ ಹೋಗೋಣ. ನೀ ಮುಂದೆ ಹೋಗಿ ಪಟೇಲರಿಗೆ ತಿಳಿಸು" ಅಂತ ಲಿಂಗನ್ನ ಓಡಿಸಿದ.

"ಅವಸ್ಥೆ ಕೆಲಸ ಕಣೋ" ಅಂದ.

"ಏನೋ ಅವಸ್ಥೆ ಕೆಲಸ?" ಅಂದೆ.

ಅದಕ್ಕೆ ಹೇಳಿದ "ಇದೇ—ಈ ವೈದ್ಯಗಿರಿ ಕಣ್ರೋ. ಈಗ ಮೊದಲಿನ ಹಾಗೆ ಕೂತ ಜಾಗದಲ್ಲಿ ಬೀಟೆ ಒರ್‍ಕೊಟ್ಟು ಬಿಸಾಕೋ ಹಾಗಿಲ್ಲ. ನಾವೆಲ್ಲ ನಮ್ಮ ಸುತ್ತ ಮುತ್ತ ಹಳ್ಳಿಗಳನ್ನೆಲ್ಲಾ ಸುತ್ತಿ, ಅಲ್ಲಿನ ಜನಗಳನ್ನೆಲ್ಲಾ ಭೇಟಿ ಮಾಡಿ, ಅವರ ಸಂಸಾರ ತಾಪತ್ರಯ ವಿಚಾರಿಸಿ ಅವರಿಗೆ ಬೇಕಾದ ಔಷಧಿ ಕೊಟ್ಟು ಬರಬೇಕು.

ಮೊದಲಾದ್ರೆ ನಾವು ಒಂದು ಹಸುರು ನೋಟು ನೋಡೋ ತನಕ ನಮ್ಮ ಜಾಗ ಬಿಟ್ಟು ಕದಲ್ತಾ ಇರ್ಲಿಲ್ಲ—Head quarters ಬಿಟ್ಟು—ಈಗ ನೋಡಿ"—ಅಂದ.

ನನಗೆ ಅಯ್ಯೋ ಪಾಪ ಅನ್ನಿಸಿತು. ಅಂದೆ. "ಅಂದರೆ ಕೆಲಸವೇನು ಕಷ್ಟ ವಿಲ್ಲ" ಅಂತ ಮುಂದುವರಿದ —ಮನಸ್ಸಿಟ್ಟು ಮಾಡಬೇಕು ಅಷ್ಟೇ—ಚೆನ್ನಾಗಿ ರುತ್ತೆ. ಆದರೆ ಈ ಹಳ್ಳಿಯೋರು ನಮ್ಮೇಲೇ ಸವಾರಿ ಮಾಡ್ತಾರೆ. ಈಗೀಗ ಎಲ್ಲೆಲ್ಲೂ ಈ ಹಳ್ಳಿಯೋರ ತರಹಾನೇ ಬದಲಾಯಿಸ್ಬಿಟ್ಟಿದೆ. ಮಹಾತ್ಮಾಜೀ ಹೇಳಿದ್ದು ನಮ್ಮ ನಾಯಕರಿಗೆ—'ಹಳ್ಳಿಗಳಿಗೆ ಸೇರಿ—ಹಳ್ಳಿಗರನ್ನು ಉದ್ಧಾರ ಮಾಡಿ' ಅಂತ, ಆದರೆ ಅವರು ಮಾಡಿರೋದೇನು—ಹಳ್ಳೀನ ಬಿಟ್ಟು ಬಂದರು. ಹಳ್ಳಿಯವರನ್ನು ಉದ್ಧಾರ ಮಾಡೋಕೆ ಬದಲು ಅವರನ್ನು ತಲೆ ಮೇಲೇರ್ಸಿದ್ದಾರೆ. ಅಧಿಕಾರಿಗಳಲ್ಲಿ ಹಳ್ಳಿಯವನಿಗಿದ್ದ ಗೌರವ, ಭಯ, ಭಕ್ತಿ ಎಲ್ಲಾ ತಪ್ಪಿಸಿದ್ದಾರೆ. ಹಾಗಾಗಿ ಈಗೇನಾಗಿದೇಂತ?—ಹಳ್ಳಿಯವನಿಗೆ ಗೊತ್ತಿರೋದೇನು?—ಅವನ ಪ್ರದೇಶದಿಂದ ಚುನಾಯಿತನಾದ ಮಂತ್ರಿ. ಸರಿ ತಕೋ—ಬಸ್ ಬರೋದು ಲೇಟಾಯ್ತು—ಮಂತ್ರೀಗೆ ಅರ್ಜಿ ಬರಿ! ಡಾಕ್ಟರು ಅವನ ಮನೇಗೆ ಒಂದು ಬಾಟ್ಲು ಟಿಂಚರ್ ಕಳಿಸಲಿಲ್ಲ—ಮಂತ್ರೀಗೆ ಅರ್ಜಿ ಬರಿ! ಪಕ್ಕದ ಜಮೀನಿನಾತ ಮುತ್ತೊಂದು ಗದ್ದೆ ಕೊಂಡ—ಅವನ ಮೇಲೆ ಮಂತ್ರೀಗೆ ಒಂದು ದೂರು ಬರಿ! ಹೀಗೆ—ಹಳ್ಳಿಯೋರತ್ರ ಮಾತಾಡಬೇಕಾದರೆ ಎಲ್ಲಾ Cabinet levelಲ್ಲೇ ವಿನಹ ಮನುಷ್ಯರ ಲೆವಲ್ಲೇ ಇಲ್ಲಯ್ಯಾ" ಅಂದ.

ಅದಕ್ಕೆ ಚಂದೀ "ಏನಯ್ಯಾ ಮಾಧು—ಹಾಗಾದ್ರೆ ನಿನ್ನ ಜೊತೇಲಿ ಬರೋಕೇ ನಂಗ್ಹೆದ್ರಿಕೆಯಾಗುತ್ತಲ್ಲಾ" ಅಂದ.

"ಮಾಧು" ಹಾಗೇನಿಲ್ಲ. ಅದರಲ್ಲೂ Exceptions ಇವೆ. ಈಗ್ಹೋಗ್ತಿರೋ ಹಳ್ಳಿ ಇದೆ ನೋಡು—ಪರವಾಗಿಲ್ಲ. ಒಳ್ಳೆ ಜನ, ಆದರೆ back ward-ಅದಕ್ಕೆ ಒಳ್ಳೇ ಜನ. ನೀವೇ ನೋಡಿ" ಅಂದ.

ಅಷ್ಟರಲ್ಲಿ ತಲಗೇರಿ ಸಿಕ್ಕಿತು. ಲಿಂಗ ಓಡಿಬಂದು ಮಾಧು ಕೈಲಿದ್ದ Hat ತೆಗೆದುಕೊಂಡ. ಸ್ವಲ್ಪ ಮುಂದೆ ಪಟೇಲರ ಭೇಟಿಯಾಯಿತು. ಮಾಧು ಅವರಿಗೆ ನಮ್ಮನ್ನು ತೋರಿಸಿ—

"ನೋಡಿ ಪಟೇಲರೇ—ಇವರು ಬೆಂಗ್ಳೂರಿನವರು. ನನ್ನ ಬಾಲ್ಯ ಸ್ನೇಹಿತರು. ಜೊತೆಯಲ್ಲಿ ಓದಿದವರು—(??)—ದೇಶ ಸಂಚಾರಿಗಳು. ಹೋದ ವಾರ ನಿಮಗೊಂದು ಕಥೆ ಓದಿದೆನಲ್ಲಾ—ಆ ಪತ್ರಿಕೆಗಳಲೆಲ್ಲಾ ಇವರು ಬರೀತಿರ್ತಾರೆ" ಅಂತ ಆದಷ್ಟು ಹೊಗಳಿದ.

ನಾವು ಮುಖದಲ್ಲಿ ಆದಷ್ಟು ಗಂಭೀರ ಮೆತ್ತಿಕೊಂಡು ಹಿಗ್ಗಿದೆವು. ಪಟೇಲರಿಗೆ ನಮ್ಮಲ್ಲಿ ಗೌರವ ಹುಟ್ಟಿರಬೇಕು. ಕೈಜೋಡಿಸಿ

"ದಯಮಾಡಿಸಿ ಬುದ್ಧಿ" ಅಂದ

ಎಲ್ಲರೂ ಪಟೇಲರ ಮನೆ ವರಾಂಡಾದಲ್ಲಿ ಕುಳಿತೆವು. ಎಳ್ನೀರು ಕುಡಿದೆವು. ಮಾಧು ಎದ್ದು "ಲ್ರೋ—ನೀವು ಇಲ್ಲೇ ಪಟೇಲರ ಹತ್ತಿರ ಮಾತಾಡ್ತಿರಿ. ನಾನು ಹಳ್ಳಿ ಒಂದು Round ಸುತ್ತಿ ಬರುತ್ತೇನೆ" ಅಂತ ಹೇಳಿ ಲಿಂಗನ ಜೊತೆಯಲ್ಲಿ ಹೊರಟ. ನಾವು ಪಟೇಲನ ಜೊತೆಯಲ್ಲೇ ಉಳಿದೆವು. ಅದೂ ಇದೂ ಮಾತಾಡುತ್ತಿರುವಾಗ ಒಂದು ಹುಡುಗರ ತಂಡ ಓಡಿಬಂತು—ಬೀದಿಯಲ್ಲಿ. ಆ ತಂಡದಿಂದ ಒಬ್ಬ ಹುಡುಗ ಪಟೇಲರಲ್ಲಿಗೆ ಬಂದು "ಅಪ್ಪಯ್ಯಾ—ಇವತ್ತೂ ಮೇಷ್ಟ್ರು ಬರ್ಲಿ ಲಾ"ಂತ ಹೇಳಿ ಒಳಕ್ಕೆ ಓಡಿದ.

ಪಟೇಲ ನಮ್ಮ ಕಡೆ ತಿರುಗಿ—"ನೋಡಿ ಸ್ವಾಮಿ, ಈ ಊರಾಗೆ ಇದೇ ಗೋಳು. ಶಾಲೇಗೆ ಮೇಷ್ಟ್ರೇ ಹಾಜರಿಲ್ಲ" ಅಂದ.

"ಅದೇಕೆ? ಯಾವಾಗಲೂ ಹೀಗೇನೇ?" ಅಂದೆ.

"ನೋಡಿ ಸ್ವಾಮಿ—ಈ ಊರು ಶಾಲೇ ಮಾಸ್ತರು ಮೂರು ಮೈಲಿಂದ ಬರಬೇಕು. ಬಂದ್ರೆ ಶಾಲೆ—ಇಲ್ದಿದ್ರಿಲ್ಲ. ಪಾಪ—ಅವರಿಗೂ ಕಷ್ಟ. ಊಟ ಮಾಡಿ ಮೂರು ಮೈಲಿ ನಡೆದು ಬಂದರೆ—ಶಾಲೆ ಮುಗಿಯೋತನಕ ನಿದ್ದೆಮಾಡಿ ಎದ್ಹೋಗ್ತಾರೆ. ಅಂದ್ರೆ ಅವರು ನಿದ್ದಿಂಡೆದ್ದಾಗ ಶಾಲೆ ಮುಚ್ಕೊಂಡ್ಹೋಗ್ತಾರೆ. ಅದೂ ಅವರು ದಿನಾ ಮಾಡಾಕಿಲ್ಲ. ನಮ್ಮೂರಾಗೋ- ಒಬ್ಬರೂ ಓದ್ಹೋರಿಲ್ಲ. ಈಗೆಲ್ಡು ವರ್ಸದಾಗೆ—ಅದೇನೋ ವಯಸ್ಕರ ಸಿಕ್ಸನ—ಬಲಿತೋರ್ಗೆಲ್ಲಾ ವಿದ್ಯಾ ಕಲಿಸ್ತೇವೇಂದ್ರು—ಇಲ್ಲಿಗೆ ಮಂತ್ರಿಗಳು ಬಂದಿದ್ರು. ಜನ ಬಲಿತವ್ರೆ. ವಿದ್ಯಾ ಇನ್ನೂ ಬರ್ಲಿಲ್ಲ. ಏನೋ ಆದಾದ್ರೂ ಬಂದಿದ್ರೆ ನಾವೇ ಕಲಿತೋರು ನಾಲ್ಕು ಜನ ಸೇರಿ ನಮ್ಮ ಹೈಕಳಿಗೆ ನಾವು ಕಲ್ತಿದ್ದೆಲ್ಲಾ ಕಲಿಸ್ಬೋದಾಗಿತ್ತು. ಆದರೆ ನಮ್ಮ ಕೈಯ್ಯಾಗೇನಿದೇ?" ಅಂದ.

ರಾಜ "ಹೌದ್ರೋ—ಪಟೇಲರು ಹೇಳೋದು ನಿಜ. ನಮ್ಮ leaders ಉ ಸುಮ್ಮನೆ ಯಾವ ಯಾವುದೋ Drive ಅಂತ Time and Money— Waste ಮಾಡೋಕೆ ಬದಲು ಈ Adult Educationಗೆ ಗಮನ ಕೊಟ್ಟು, ಸರಿಯಾಗಿ Systematic ಕ್ಕಾಗಿ organise ಮಾಡಿ ಆಯಾ ಹಳ್ಳೀಲಿ ಹುಡುಗರ ವಿದ್ಯಾಭ್ಯಾಸಾನ ಅವರವರ ಜವಾಬ್ದಾರಿಗೇ ಕೊಟ್ರೆ ಎಷ್ಟೋ ವಾಸಿ. ಒಂದೆ ರಡಕ್ಷರದ ಜೊತೆಗೆ ಒಂದೊಂದು ಕಸಬೂ ಕಲಿಸ್ತಾರೆ . ನೋಡು C.R ...."

ಅಷ್ಟರಲ್ಲಿ ಮಾದು, ಲಿಂಗ ತಮ್ಮ ವಿಜಯ ಯಾತ್ರೆ ಮುಗಿಸಿ ಬಂದರು. ಪಟೇಲರಿಗೆ ನಮಸ್ಕರಿಸಿ ತಲಗೇರಿಬಿಟ್ಟೆವು.

ಮಾಧು ಮನೆಯಲ್ಲಿ ಸಮಾರಾಧನೆ ಊಟವಾಯಿತು. ಊಟವಾದ ಮೇಲೆ ಚಂದೀ ನನಗೆ ಜ್ಞಾಪಿಸಿದ—ನನ್ನ ಹತ್ತಿರವಿದ್ದ Fruit-Tinನ್ನ. ನಾನು ಮರೆ

ತಿದ್ದೆ. ಮೈಸೂರಿನಲ್ಲಿ ಒಂದು Tin—ಬಣ್ಣದ Label ಇಂದು—ಅನಾನಸ್‌ದು—ಕೊಂಡಿದ್ದೆವು. ಚೀಲದಿಂದ ತೆಗೆದು ರಾಜನ ಕೈಗೆ ಅದನ್ನ ತೆಗೀಂತ ಕೊಟ್ಟೆ. ರಾಜ ಅದನ್ನ ನೆಲದ ಮೇಲಿಟ್ಟು, ಅದರ ಮುಚ್ಚಲದ ಅಂಚಿಗೆ ಒಂದು ಚಾಕು ಕೊಟ್ಟು ಸುತ್ತಿಗೆ ಮೇಲೆತ್ತಿದಾಗ—ಆ ಟಿನ್ನು ಉರುಳಿಹೋಗಿ ರೂಮಿನ ಮೂಲೆಯಲ್ಲಿದ್ದ ಒಂದು ಸೀಸೆಯನ್ನು ಒಡೆಯಿತು. ರಾಜನ ಕೈಯಿಂದ ಚಾಕು ಹಾರಿ ಅವನ ಕಣ್ಣಿನ ರೆಪ್ಪೆಯನ್ನು ಕತ್ತರಿಸಿತು. ಅವನ ಬಲಗೈಲಿದ್ದ ಸುತ್ತಿಗೆ ಎಡಗೈ ಹೆಬ್ಬೆಟ್ಟನ್ನು ಜಜ್ಜಿತು.

ಚಂದಿ ಆ ಟಿನ್ನನ್ನು ತೆಗೆದುಕೊಂಡು—ಒಂದು ಕತ್ತರಿ ತರಿಸಿದ. ಆ ಕತ್ತರಿಯ ಒಂದು ಕೈ ಮುರಿಯಿತು. ಇನ್ನೊಂದು ಕೈ—ಚಂದೀ ಕೈಯಿಂದ ಎಗರಿ—ದೂರದಲ್ಲಿ ನಿಂತಿದ್ದ ಲಿಂಗನ ಮುಖಕ್ಕೆ ತಾಕಿ ಅವನ್ನು ಪರಚಿತು. ಲಿಂಗ ಹೊರಕ್ಕೆ ಓಡಿದ. ಟಿನ್ನು ತೂತಾಗಲಿಲ್ಲ. ಚಂದೀ ಮೇಲೆ ರೇಗಿ - ನಾನು ನಾನು ತೆಗೆದುಕೊಂಡೆ—ಆ ಟಿನ್ನನ್ನ. ನೆಲಕ್ಕೆ ಅಪ್ಪಳಿಸಿದೆ—ಸಿಮೆಂಟ್ ನೆಲ. ಮೂರಡಿ ಬಿರಕು ಬಿಡತು. ಟಿನ್ನು ಬಿರುಕಾಗಲಿಲ್ಲ. ಕಡೆಗೆ "ಒಂದು ಉಳಿ ಬೇಕು" ಅಂದೆ. ಮಾಧು ತನ್ನ ಬೀರುವಿನಿಂದ ಬೆಳ್ಳಿಯಲ್ಲಿ ಮಾಡಿದಂತಾ ಒಂದು ಉಳಿ ತಂದುಕೊಟ್ಟ. ಆ ಉಳಿಯನ್ನು ಟಿನ್ನಿನ ಮೇಲಿಟ್ಟು ಸುತ್ತಿಗೆ ಇಂದ ಬಲವಾಗಿ ಹೊಡೆದೆ. ಎಡಗೈ ಬಾಯಿಗೆ ಹೋಯ್ತು. ಉಳಿ ಟಿನ್ನೊಳಗೆ ಸಿಕ್ಕಿಹಾಕಿಕೊಂಡಿತು. ಅದನ್ನು ತೆಗೆಯೋದರಲ್ಲಿ ನನ್ನ ಬಲಗೈಯ್ಯೂ ಕತ್ತರಿಸಿ—ಮಾಧೂಗೆ ಒಂದು ಥಾನು Bandage ಖರ್ಚಾಯಿತು. ಟಿನ್ನು ಉಳಿ ಹಾಗೇ ಉಳಿದವು.

ರಾಜ—"Hopeless ಕಣೊ. ಬಿಸಾಕೋ" ಅಂದ. ಮಾಧು "ಲೋ—ಆ ಉಳಿ ತೆಗೇರ್ರೋ—ಅಪ್ಪನ್ದೀದು. ನಿಮ್ಮ fruit juice ಮನೆ ಹಾಳಾಯ್ತು" ಅಂತ ಶಪಿಸಿದ.

ಆ ಟಿನ್ನನ್ನ ಮಧ್ಯದಲ್ಲಿ ಸೇರಿಸಿಕೊಂಡು, ನಾವು ನಾಲ್ಕು ಜನವೂ ಅವರವರ ಕೈಲಾದಷ್ಟು ಸುತ್ತಿಗೆ ಇಂದ ಜಜ್ಜಿದೆವು. ಸಿಮೆಂಟ್ ನೆಲ—ಅರ್ಧಡಿ ಹೊಂಡವಾಯ್ತು. ಆ ಮೇಲೆ ಲಿಂಗನ್ನ ಕರೆದು ಪುಸಲಾಯಿಸಿ ಅವನ ಕೈಗೆ ಸುತ್ತಿಗೆ ಕೊಟ್ಟೆ. ಅವನು ರೌದ್ರಾವತಾರ ತಾಳಿ ಮೂರೇಟು ಹೊಡೆಯೋ ಹೊತ್ತಿಗೆ ಮಾಧುವಿನ ಬೆಳ್ಳಿ ಉಳಿ ಮೇಲೆಗರಿ ಅವರ ಬೀರು ಗಾಜನ್ನು ಛೇದಿಸಿ. ಒಳಕ್ಕೆ ಸೇರಿತು. ಒಂದು ಕೊಡ ನೀರಿನಿಂದ ಸೀಮೆಂಟ್ ನೆಲ—ಹಳ್ಳ ತೊಳೆಸಿದ್ದಾಯ್ತು Fruit-juice ಅಂಟು ಹೋಗಿಸಲಿಕ್ಕೆ ಲಿಂಗ ಆ ಟಿನ್ನನ್ನ ಒಂದು ಇಕ್ಕಳದಿಂದ ಎತ್ತಿ ದೂರ ಬಿಸಾಕಿದ. ಅವನ ಆಕಾರ ಪುನಹ ಶಾಂತವಾಯಿತು. ವಾತಾವರಣವೂ ಶಾಂತವಾಯಿತು.

ಮಾಧೂ ಮನೆಯಲ್ಲೇ Tea ಮುಗಿಸಿ ಹೊರಟೆವು—

ವಿದ್ಯಾಭ್ಯಾಸದಲ್ಲಿ ಕಸುಬು ಕಲಿಸಲೇಬೇಕು ಎಂದ ಮಾಧು.

—"ಶೇಷ".

ಅಸಾಧ್ಯ

ಬಹು ದೂರದ ಪಯಣವದು. ಇಂಟರದ
ಡಬ್ಬಿಯಲ್ಲಿ ಶೇಖರನೊಬ್ಬನೇ ಪಯಣಿಗ.
ಬೇಸರದ ದಾರಿಯನು ಎನಿತು ಕಳೆಯುವೆನೆಂದು
ಚಿಂತಿಸುತಿರೆ, ನಡುವಣ ನಿಲ್ದಾಣದಲಿ ರೈಲ
ಹತ್ತಿದಳೊಬ್ಬ ನರ್ಸು. ಆ ಮಾತು ಈ ಮಾತು
ಆಡುತ್ತ ದಾರಿ ಸಾಗಿತು. ಶೇಖರನೂರು
ಬಂದಾಗ್ಯೆ, ನರ್ಸಳಿಗೆ ವಂದಿಸಿ ಪೇಳಿದನೀ
ಪರಿಯಲಿ "ಹರಟೆಯಾ ಭರದಲ್ಲಿ ಮೈಲಿ
ಗಳ ಅರಿವೇ ಇಲ್ಲದಾಯ್ತೆನಗೆ. ನಿಮಗೆ ನಾ
ಬಹಳ ಋಣಿ. ಬರುತೇನೆ. ಎನಗೆನಿತಾದರೂ
ಅಪಘಾತವಾದೊಡೆ ಬಹೆನು ನಿಮ್ಮಲ್ಲಿಗೇ
ಶುಶ್ರೂಶೆಗಾಗಿ" ಮುಗುಳು ನಗೆ ಬೀರಿ ಉತ್ತರಿ
ಸಿದಳಾಕೆ "ಸಂತೋಷ. ಆದರಂಥಾ ಘಟನೆ
ಯೆಂದೆಂದಿಗೂ ನಿಮಗಾಗದು." ಅಚ್ಚರಿಯ
ಶೇಖರನು ಕೇಳಲೇಕೆಂದು ನುಡಿದಳಾ
ಸ್ಮಿತವದನೆ "ನಾನೋರ್ವ ನರ್ಸು, ಮೆಟರ್ನಿಟಿ
ವಾರ್ಡಿನಲಿ."

—"ಬಾಲು"

ಒಂದೊಂದು ಸರ್ತಿ ಚೆನ್ನ

—

"ಯಾರು? ಡಾಕ್ಟರೇ! ಯಾಕೋ ನಮ್ಮ ಲೀಲ ನಿನ್ನೆಯಿಂದ ಹೊಟ್ಟೆನೋವು ಅನ್ನುತ್ತಿದ್ದಾಳೆ, ಅರ್ಧ ಸಲ್ಫಾ ಮಾತ್ರೆ ಕೊಟ್ಟಿದ್ದೇನೆ, ಇನ್ನೇನಾದರೂಕೊಡಬೇಕೇ" ಎಂದು ಕೋಮಲ ವಾಣಿ ಕೇಳಿಸಿತು ಟೆಲಿಫೋನಿನಲ್ಲಿ. ಕೇಳುಕ್ಕೆ ದನಿ ಇಂಪಾಗಿತ್ತು. ದನಿಯಿಂದ ಹೇಳುವುದಾದರೆ ಲೀಲಳಿಗೆ ಮೂರೇ ತಿಂಗಳು ವಯಸ್ಸಿರಬಹುದು ಎನ್ನಿಸಿತು. ದನಿ, ಬಾಣಂತಿ ದನಿ. ಆದರೆ ಅರ್ಧ ಮಾತ್ರೆ ಸಲ್ಫಾ ಎಂದಾಗ ಮೂರು ವರ್ಷ ಇರಬೇಕು ಲೀಲಳಿಗೆ. ಅಂದರೆ ದನಿಯಾಕೆಯ ಮೊದಲ ಮಗು ಲೀಲ ಇರಬೇಕು ಎನ್ನಿಸಿತು ಆ ಕೋಮಲ ದನಿಯು ಕೇಳಿಸಿದಾಗ.

ಇಷ್ಟೂ ಮನಸ್ಸಿಗೆ ತೋಚಿದ ಮೇಲೆ ಹೇಳಿದೆ ಟೆಲಿಫೋನಿಗೆ. "ಇದು ಲಾಯರ್ ಭೀಮರಾಯರ ಮನೆಮ್ಮಾ. ಲಾಯರು ಭೀಮರಾಯರು ಮಾತನಾಡುತ್ತಾ ಇರೋದು" ಎಂದು.

"ಅಯ್ಯೋ! ಸಾರಿ" ಎಂದು ಮರುತ್ತರದ ಜತೆಗೆ ಟೆಲಿಫೋನ್ ಸಂಭಂಧ ಕಳಚಿಹೋಯಿತು.

ಎರಡು ಸಾವಿರ ಮುಂಗಡ ತೆತ್ತು ಮೂರು ತಿಂಗಳು ಟೆಲಿಫೋನ್ ಸಿಬ್ಬಂದಿಗೆಲ್ಲಾ ಜೆಣ್ಣೆ ಹಚ್ಚಿ ಹೊಸಾ ಟೆಲಿಫೋನ್ ಹಾಕಿಸಿಕೊಂಡಿದ್ದೆ. ಲಾಯರ್‌ಗಿರಿಗೆ ಈ ಸೊಬಗು ಕಳೆಕಟ್ಟುತ್ತೆ. ನೋಟೀಸ್ ಕೊಟ್ಟರೆ ಮೊದಲು ಒಂದು ರೂಪಾಯಿ ತೆಗೆದುಕೊಳ್ಳುತ್ತಿದ್ದೆ. ಈಗ ಟೆಲಿಫೋನಿನಲ್ಲಿ ಮಾತನಾಡ್ತಾ ನೋಟೀಸು ಬರೆದು ಐದು ಗಿಟ್ಟಿಸಬಹುದು ಎಂದು ಆಸೆಯಾಗಿದ್ದೆ.

ಟೆಲಿಫೋನಿನವರು ನನ್ನ ಹೊರ ಅಂಗಳದಲ್ಲಿ ಇದನ್ನು ಸ್ಥಾಪಿಸಿ ಹೋದಮೇಲೆ ನಾನು ಫೋನ್ ಮಾಡುವ ಮೊದಲೇ ಈ ಚೊಚ್ಚಲ ಸಂಭಾಷಣೆ ಆಯಿತು. ತಪ್ಪು ನಂಬರು ಆದರೂ ನನಗೆ ಲಕ್ಷಣಕಾರಿ, ಶುಭ ಶಕುನ, ಎಂದುಕೊಂಡೆ.

* * *

ಕಾಲು ಗಂಟೆಯಲ್ಲಿ ತಿರುಗಿ ಟ್ರೆನ್ ಟ್ರೆನ್ ಎಂದಿತು. ನಾನು ಟೆಲಿಫೋನ್ ಕಿವಿಗೆ ಸೇರಿಸುವ ಹೊತ್ತಿಗೆ ಮನೆಯವರೆಲ್ಲಾ ಸುತ್ತ ನೆರೆದಿದ್ದರು. "ಇದು ರಂಗು ಮಾತನಾಡೋದು, ಮಧ್ಯಾಹ್ನ ನಾಲ್ಕು ಗಂಟೆಗೆ ಮನೆಗೆ ಬಂದು ಹೋಗಿ ಡಾಕ್ಟರೇ–

ಇವತ್ತು ಕೋಡುಬಳೆ ಮಾಡಿದೆ, ಅಜ್ಜಿ ಹೇಳಿದರು ಖಂಡಿತ ಡಾಕ್ಟರನ್ನು ಕರಿ ಅವರಿಗೆ ನಮ್ಮನೆ ಕೋಡುಬಳೆ ಬಲು ಇಷ್ಟ ಅಂತ." ಯಾವ ರಂಗುವೋ ಇಷ್ಟು ಹೇಳಿ ಟೆಲಿ ಫೋನ್ ಮುಚ್ಚಿಟ್ಟ.

ಯಾರು? ಯಾರು? ಏನಂದರು? ನೀವ್ಯಾಕೆ ಮರುಮಾತಾಡಲಿಲ್ಲ ಅಂತ ನೆರೆದಿದ್ದ ಮನೆಯವರ ಪ್ರಶ್ನೆ. ಅವರಿಗೆ ನಡೆದ ವಿಷಯ ಹೇಳೋ ಹೊತ್ತಿಗೆ ನಾನು ಸುಸ್ತು.

* * *

ಟ್ರನ್ ಟ್ರನ್....ಟ್ರನ್ ಟ್ರನ್....ಟ್ರನ್ ಟ್ರನ್....ಮೂರು ಸಾರಿ ಬಾರಿಸಿದ ಮೇಲೆ ಅದನ್ನೆತ್ತಿ ಕಿವಿ ಕಚ್ಚಿಸಿದೆ. "ಶ್ರೀರಂಗಪಟ್ಟಣದಲ್ಲಿ ಜಮೀನು ಹೇಳಿದ್ದರಲ್ಲ. ಈಗ ಒಂದೇ ಕಡೆ ಎಂಟು ಎಕರೆ ದಿವನಾದ ಸ್ಥಳದಲ್ಲಿ ಸಸ್ತಾ ಸಿಗುತ್ತೆ" ಎಂದಿತು ದೂರವಾಣಿ.

"ಸಿಕ್ಕರೆ ದಕ್ಕಿಸಿಕೊ" ಎಂದೆ. ಸ್ವಲ್ಪ ಬೇಜಾರಿನಿಂದ.

"ಯಾಕೆ ಡಾಕ್ಟರೇ! ನೀವೇ ಬೇಕು ಎಂದು ಮೇಲೆ ಬಿದ್ದು ಕೇಳ್ತಾಇದ್ದಿರಿ ಮೂರು ವರ್ಷದಿಂದ. ಈಗ ಅನುಕೂಲವಾಗಿ ಸಿಕ್ಕಾಗ ನೀನೇ ದಕ್ಕಿಸಿಕೋ ಎಂತೀರಿ? ಏನು ಕಾರಣ! ಮೈ ನೆಟ್ಟಗಿಲ್ಲವೇ?" ಎಂದು ಗಡುಸು ದನಿಯ ದೂರವಾಣಿ.

"ನೀನು ದಕ್ಕಿಸಿಕೋ! ಆ ಮೇಲೆ ಕೋರ್ಟು ಕಛೇರಿ ಹತ್ತಬೇಕಾದರೆ ಈ ನಂಬರಿಗೆ, ಇಲ್ಲಿಗೆ, ಫೋನ್ ಮಾಡು. ಇದು ಲಾಯರ ಭೀಮರಾಯರ ಮನೆ, ಲಾಯರ ಭೀಮರಾಯರ ಫೋನು. ಈ ಮನೇಲಿ ಯಾವ ಡಾಕ್ಟರೂ ಇಲ್ಲ. ಯಾವ ಡಾಕ್ಟರೂ ಕಾಲಿಡೊ ಹಾಗೂ ಪರಿಸ್ಥಿತಿ ಇಲ್ಲ" ಎಂದು ನಾನು ಮೀಸೆ ತಿರುವುತ್ತಾ ಗಡುಸಾಗಿಯೇ ಉತ್ತರಿಸಿದೆ.

ಟೆಲಿಫೋನ್ ಆಕಡೆ ಥಂಡಾ ಆಯಿತು.

* * *

ಇನ್ನು ಒಂದು ತಾಸಿನಲ್ಲಿ ಆರು ಕರೆಗಳು ಈ ರೀತಿ ಬಂದುವು. ನಮ್ಮನೆಗೆ ಬಂದು ಹೋಗಿ—ನಮ್ಮನೆಗೆ ಊಟಕ್ಕೆ ಬನ್ನಿ—ನಮ್ಮನೆಗೆ ಅಕ್ಷತೆಗೆ ಬನ್ನಿ—ನಮ್ಮ ನೆಗೆ ಇಸ್ಪೀಟಿಗೆ ಬನ್ನಿ—ಇತ್ಯಾದಿ—ಇತ್ಯಾದಿ—ಖಾಯಿಲೆ ಬನ್ನಿ ಅಂತ ಕರೆದವರೇ ಇಲ್ಲ.

ಆಗ ನನಗನ್ನಿಸಿತು "ಇದು ಬರೀ ತಪ್ಪು ನಂಬರಿನ ಹಾವಳಿ ಅಲ್ಲಾ ಇದರ ಮರ್ಮ ಇನ್ನೂ ಘೂಢವಾಗಿದ್ದಿರಬೇಕು ಎಂದು.

ಟೆಲಿಫೋನ್ ಕೇಂದ್ರ ಕಚೇರಿಗೆ ಫೋನ್ ಮಾಡಿದೆ. ಹೀಗಾಯ್ತು ಏಕೆ ಎಂದೆ. ನಿಮಗೆ ಈಗ ಕೊಟ್ಟಿರೋ ಫೋನು ಡಾ|| ಮದನರಾಯರ ಟೆಲಿಫೋನ್ ಆಗಿತ್ತು. ಆತ ಟೆಲಿಫೋನ್ ಬೇಡ ಅಂದ ಮೇಲೆ ಅದನ್ನ ನಿಮಗೆ ವರ್ಗಾಯಿಸಿದೆ ಇನ್ನೊಂದೆರಡು ವಾರ ಈ ತಾಪತ್ರಯ. ನಂತರ ಎಲ್ಲಾ ಸರಿಹೋಗುತ್ತೆ ಎಂದು ವಿವರಣೆ ಬಂತು.

ಇನ್ನು ಒಂದೆರಡು ವಾರ ಇದನ್ನು ಹೇಗಪ್ಪಾ ತಡೆಯೋದು ಎಂದು ಕೇಳುತ್ತಿದ್ದೆ.

ಆ ವೇಳೆಗೆ ಯಾರೋ ಬಾಗಿಲು ತಟ್ಟಿದರು. ಹೊರಗೆ ನಿಂತಿದ್ದವರು ಡಾಕ್ಟರು ಎಂದು ಹೇಳಲು ಕಷ್ಟವೇ ಇತ್ತಿಲ್ಲ. ಆ ವೇಷ, ಆ ಭೂಷಣ, ಆ ಹೊಟ್ಟೆ, ಆ ಸ್ಟೆತಾಸ್ಕೋಪ್, ಕಂಡವರ ಹೊಟ್ಟೆ ನೋವು, ಹೊಟ್ಟೆ ಉರಿಯಿಂದ, ಈತ ಹೊಟ್ಟೆ ಬೆಳೆಸಿದ ಖಳೆ—ಅನುಮಾನವೇ ಇತ್ತಿಲ್ಲ. ನೋಡಿದ ಕೂಡಲೇ ಸ್ವಲ್ಪ ಗಾಬರಿ. "ಇವ ನಮ್ಮನೆ ಬಾಗಿಲಿಗೆ ನಾನು ಹೇಳಿ ಕಳುಹಿಸದೇನೇ ಯಾಕೆ ಬಂದ" ಇದು ಒಳ್ಳೆ ಶಕುನವಲ್ಲ. ಪರೀಕ್ಷೆಗೆ ಹೊರಟಾಗ ದರ್ಭೆ ಕಂಡಂತೆ, ಮದುವೆಗೆ ಹೊರಟಾಗ, ಒಂಟಿ ಬ್ರಾಹ್ಮಣನನ್ನು ಕಂಡಂತೆ, ಸಾಲಕ್ಕೆ ಹೊರಟಾಗ ಸಾಹೇಬರನ್ನು ಕಂಡಂತೆ, ಡಾಕ್ಟರನ್ನು ಕಂಡರೆ ಏನೋ ಅವರ ಕರ್ಮದ ವಾಸನೆ ಬರುತ್ತೆ, ಆಗಬಾರದ್ದು ಆಗುತ್ತೆ ಎನ್ನುವ ಶಂಕೆ ಬರುತ್ತೆ. ರಾಹುಕಾಲದಲ್ಲಿ ಕಾಣಬೇಕಾದ ದೃಶ್ಯ ಗುಳಿಕ ಕಾಲದಲ್ಲಿ ಕಾಣಬಾರದು ಅಲ್ಲವೇ?

ಅಷ್ಟರಲ್ಲೇ ಡಾಕ್ಟರಂದರು.

"ಎದುರು ಮನೆಗೆ ಬಂದಿದ್ದೆ ಸಾರ್! ಆ ಮನೆಯಾಕೆಗೆ ಬೇನೆ ಬಂದಿದೆ. ತಕ್ಷಣ ಆಸ್ಪತ್ರೆಗೆ ಸಾಗಿಸಬೇಕು. ನಿಮ್ಮನೆಯಲ್ಲಿ ಟೆಲಿಫೋನಿದೆ ಸ್ವಲ್ಪ ಅವಕಾಶ ಕೊಟ್ಟರೆ ಆಸ್ಪತ್ರೆಗೆ ಫೋನ್ ಮಾಡಿ ಆಂಬುಲೆನ್ಸ್ ತರಿಸುತ್ತೇನೆ—ನನ್ನ ಹೆಸರು ಡಾ|| ಮದನರಾಯ ಅಂತ" ಎಂದು.

ಅದಕ್ಕೇನು ಡಾಕ್ಟರೇ; ಬನ್ನಿ ಬನ್ನಿ. ನನ್ನ ಹೆಸರು ಲಾಯರು ಭೀಮರಾಯ ಅಂತ. ಇವತ್ತೆಲ್ಲಾ ನಿಮ್ಮ ಹೆಸರೇ ಕೇಳ್ತಾ ಇದೇನೆ. ಏನು ವಿಧಿಯ ಸೊಬಗೋ! ನಿಮ್ಮನ್ನೇ ಕಾಣುವ ಸುಯೋಗ ಒದಗಿತು. ಬನ್ನಿ ಬನ್ನಿ ಒಳಕ್ಕೆ ಎಂದು ಅಂಗಳಕ್ಕೆ ಕರೆದೊಯ್ಯುವ ಹೊತ್ತಿಗೆ,

ಟ್ರನ್ ಟ್ರನ್....ಟ್ರನ್ ಟ್ರನ್....ಟ್ರನ್....ಬೇಗ ಹೋಗಿ ಟೆಲಿಫೋನ್ ತೆಗೆದುಕೊಂಡೆ "ಇದು ಗ್ರೇಸಿ ಮಾತಾಡ್ತಾ ಇರೋದು. ನನಗೆ ಇವತ್ತು ಅರ್ಧ ದಿನ ಕೆಲಸ. ಸಂಜೆ ವಿರಾಮ. ಗ್ಲೋಬ್ ಸಿನೀಮಾದಲ್ಲಿ ಕ್ಯಾಸನೋವ ಚಿತ್ರವಿದೆ ಜ್ಞಾಪಕ ಇದೆಯೇ? ನೀವು ಸಂಜೆ ಎಂಟೂವರೆಗೆ ಆಸ್ಪತ್ರೆ ಬಾಗಿಲ ಹತ್ತಿರ ಬಂದರೆ

ನಾನು ರೆಡಿಯಾಗಿರ್ತೇನೆ. ಎಲ್ಲಾದರೂ ಊಟ ಮಾಡಿ ಸಿನಿಮಾಗೆ ಹೋಗೋಣ ಆಗಬಹುದೇ! ಮದನ್ ಪ್ಯು ಪ್ಯು" ಎಂದಿತು ದೂರವಾಣಿ.

"ನಿಮಗೇ ಇರಬೇಕು ಈ ಟೆಲಿಫೋನ್ ಕರೆ! ಯಾವುದೋ ಹೆಣ್ಣು ಹಲ್ಲಿ ಲೊಚಗುಟ್ಟಿದ ಶಬ್ದ ಕೇಳಿಸಿತು. ನಿಮ್ಮ ಟೆಲಿಫೋನಾಗಿತ್ತಂತೆ ಇದು, ಮೊನ್ನೆ ತನಕ".

ಎಂದು ಅರ್ಥಗರ್ಭಿತ ನೋಟದಿಂದ ಟೆಲಿಫೋನನ್ನು ಆತನ ಕೈಗೆ ಕೊಟ್ಟು ನನ್ನ ಕಿವಿಗಳೆರಡರಲ್ಲೂ ಎರಡು ಬೆರಳತುದಿ ಇಟ್ಟು ಮುಚ್ಚಿಕೊಂಡು ಕೂತೆ.

ಕಂಡವರ ಟೆಲಿಫೋನ್ ಒಂದೊಂದು ಸಾರಿ ಚೆನ್ನು.



ಸಾಹುಕಾರ—ಜಬರ್ದಸ್ತಿನಿಂದ-ದೆಹಲಿ ಸರ್ಕಾರದಿಂದ ಬಂದಹಾಗಿದೆ ಲಕೋಟೆ
ಅಂಚೆಯವ-ಅಂಜದೆ,
ಹೌದ್ರೀ ! ವರಮಾನ ತೆರಿಗೇದು ತಗಾದೆ ಲಕೋಟೆ ಇದ್ದಹಾಗಿದೆ.

ಹಾಳು ಹದಿನಾಲ್ಕು

ನರಕಚತುರ್ದಶಿ ಹಬ್ಬ ಮತ್ತೆ ಬಂತು
ನರಕವೊ ಚತುರ್ದಶಿಯೊ! ಅಂತು ಬಂತು

ಒಟ್ಟು ಮನೆಯೊಳಗಿರುವ ಮಂದಿ ಹದಿನಾಲ್ಕು,
ವರಮಾನ ಹದಿನಾಲ್ಕು into ನಾಲ್ಕು!
ಹಾಳು ಸಾಲವು ಬಿಟ್ಟು ನೂರು ಹದಿನಾಲ್ಕು
ಅಂತಿಂಥ ಶನಿಯಲ್ಲ, ಅರ್ಧ ಹದಿನಾಲ್ಕು!

ಇಂತು ಚಿಂತಿಸುತಿರಲು ಬಂದನಗೊ post-man
"M O. ಸಾರ್!" ಎಂದವನ (ನಂಬ್ರು ಹದಿನಾಲ್ಕು!)
ಮಗನ ಮಾಮೂಲಿನದು ಹದಿನೈದು ಎಂದಿರಲು
"ಹದಿನಾಲ್ಕು ಸಾರ್!"—ಎಂದ ಪಾಪಿ ಹದಿನಾಲ್ಕು

ಹದಿನಾಲ್ಕು ಹದಿನಾಲ್ಕು ಹಬ್ಬ ಹದಿನಾಲ್ಕು
ಹಾಯ್, ಚತುರ್ದಶಿ ನರಕ! ಹಾಳು ಹದಿನಾಲ್ಕು.

—ಸರೋಜಿನಿ.

ಗರುಡ ಚೂರ್ಣ ಮಾಹಾತ್ಮ್ಯಂ

ಈ ತಿರೆಯೊಳಾವಗಂ, ನಳನಳಿಪ ಬಿಳಿದಾವರೆಗಳ್ ರಂಜಿಸದೊಣಗೊಳಂಗಳಿಂ, ಕಳಕಳಿಪ ಬೇಸಗೆಯ ಬಿಸಿಗದಿರನ ಕೀರ್ತಿ ಪ್ರಭಾವ ಮೆಂಬಂತಿಡಿದ ಧೂಳಿಯಿಂ, ರಮ್ಯ ಮಪ್ಪ ಭೂಜ ಮಾರ್ಗಂಗಳಿಂದೊಡಗೂಡಿದ ನೀರಸ ಕ್ಷೇತ್ರಂ ಒಂದಿರ್ಪುದು. ಆಕ್ಷೇತ್ರದೊಣ್ ಪಡುಗಡಲಂ ಮುಡುಪಿ ಭೃಗೂಧ್ವಹಂ ಮಾಡಿದ ತಾಣದೊಳ್ ರಂಜಿಪ ಉಡುಪ ಪುರದ ಕಡುಸಾಸಿ, ಬಾಣಸಿಗರ ಬಲ್ಲಹಂಭೀಮಣಂ, ಪ್ರವಾಸಿ ಜನಮಂ ಸಂತೈಸಿಲಿರ್ಕಿದ ಕಾಫಿಯರವಟಿಗೆಯೊಂದಿರ್ಕುಂ.

ಇಂತಿರಲ್, ಬಸಂತ ಮಾಸದೊಳೊಂದಿನಂ, ಎಂದಿನಂತಿರೆ ಓದುವ ಮಕ್ಕಳ ಮಟಂ ಪರಿಯೆ, ನೇಸಱ್ ಪಶ್ಚಿಮಾಂಬುಧಿಯಂ ಸಾರ್ವನೆಂಬವಸರದೊಳಿರೆ, ಕನ್ನಡ ಕವಿಕುಲ ಲಲಾಮಂ, ಮುದ್ದಣ ಗುವರಂ ಪಗಲೆಲ್ಲ ಮೊದರಿ ದಣಿದ ಗಂಟಲ ಕರೆಗಮೋಗೊಟ್ಟು, ಬುದ್ಧಿಗಂ, ಚಿತ್ತಕಂ, ಚೈತನ್ಯಮನೂಡುವ ಕಾಫಿಯಂ ಪೀರಲೆಂದು, ದೊಡ್ಡದಾರಿಯಂ ಬಿಟ್ಟು ಅಡ್ಡದಾರಿವಿಡಿದು ಬೀಮಣನರವಟಿಗೆಯಂ ಸಾರ್ದಂ.

ಆದೊಡಾದಿನಂ ಬೀಮಣ ನೆಂದಿನಂತೆ ಕಾಲ್ಗೆನೀರ್ಗುಡದೆ, ಕೈಗೆ ಕಲಿಯುಗದಮೃತಮೆನಿಪ್ಪ ಕಾಫಿಯ ಪಾತ್ರೆಯಂ ನೀಡದೆ, ಬನ್ನಿಮೆನ್ನದೆ, ಅಡುಗೆವನೆಯೊಳ್ ಕುಳಿತು ಕಣ್ಣೊಳಾ ನೀರಂ ಸುರಯಿಸುತಂ, ಖಿಣ್ಣಮಪ್ಪ ತನ್ನ ದೇಹಮನೊಲೆಯುತಂ, ನುಣ್ಣಿತಪ್ಪ ಶಿರದ ಮುಂಭಾಗದೊಳ್ ಬಿಲದಂತಿಪ್ಪ ನಾಲಿಗೆಯ ನಲ್ಲಾಡಿಸುತಂ, ಚಪ್ಪರಿಸುತಂ, ಇರೆ ಕಂಡು ಬೆರಗಾಗಿ; ಹೋ! ಹೋ! ಇದೇ ನಿದೇಂ ಬೀಮಣಾ ಇಂತಿರ್ಪೈ! ಏಂ ಗರವೊಡೆದುದೋ? ಪಿತ್ತಂ ತಲೆಗೇರಿತೋ? ಎನುತ್ತುಂ ಮುದ್ದಣ ಗುವರಂ ಬೆಸಗೊಂಡಂ.

ಬೀಮಣಂ, ಅದೆನಾಲಿಸದೆ ಮರವಟ್ಟು, ತಲೆಯ ನೊಲೆಯುತಂ, ಸ್ವಗತದೊಳ್ ಅಹ! ಆಹಾ! ಭಲ! ಭಲಾ! ಎಂದುದ್ಗರಿಸುತಂ, ಬಸಂತದ ಮೊಲನಂ ತಾ ಚರಿಸಿ

(March hare), ಕೆಲಗಾಲಂ ಕಳೆಯೆ ಇಂತೆಂದಂ "ಏನೆಂಬೈ ಕರ್ಣಾಟಕವಿ ಕುಲ ಲಲಾಮಾ, ಏನಗೇಂ ಗರವಡೆದು, ಸವಾದಿ ಸವನಿಸಿತ್ತೆಂಬೆಯಾ ? ಎನಗೊರ್ವ ನಿಗೇಕೆ ಭಾಣಸಿಗರ ಬಲ್ಲಹನಪ್ಪ, ಪಾಂಡವ ದ್ವಿತೀಯಂ ಆದಿಬೀಮಣನಿಗುಂ ಈ ಚೂರ್ಣದ ದೆಸೆಯಿಂ, ಸವಾದಿ ಸವನಿ ಸಿತ್ತೈ, ಕೇಳ್ದರಿಯಾ?" ಎನೆ ಕೇಳ್ದೀ ಆಳಾಪವುಂ ಮುದ್ದಣ ಗುವರ ನೆಂದಂ "ಆವ ಚೂರ್ಣಂ? ಅದನಾರ್ ನಿರ್ಮಿ ಸಿದರ್ ? ನಿರ್ಮಿಸುವ ಬಗೆಯಾವುದು ? ಪೇಳ್ವೈ; ಬೇಡಿಕೊಂಬೆಂ."

ಬೀಮಣನೆಂದಂ "ಆದೊಡೆ ಕೇಳು. ಇದಕ್ಕೊಂದಿತಿಹಾಸ ಮುಂಟು. ಪೂರ್ವ ದೊಳ್ ಧರ್ಮ್ಮ ಪುತ್ರಂ ಇದಿಟ್ಟೆರಂ, ಜಳಧಿ ಪರಿವೃತ ಧರಾವಿಷಯವುಂ ಒಂದೆ ಪಾಸಂಗಿಯೊಳ್ ಸೋಲ್ತು, ಅನುಜರ್ವೆರಸಿ, ಕಾಡೊಳ್ ಈರಾರು ಬರಿಸಂ ನವೆದು, ವಿರಾಟನೂರಂ ಪೊಕ್ಕುದಂ, ಅಲ್ಲಿ ಬಾಣಸಿಗರ ಬಲ್ಲಹಂ ಆದಿ ಬೀಮಣಂ ಜೀಮೂತ ನಂಗೆಲ್ದು, ಕೀಚಕ ಸೊಣಗ ಕುಲಮುಂ ಕಳ್ದರಿಸಿದುದಂ, ನೀಂ, ಒದ್ದೆಬಟ್ಟೆಗನ ಗದುಗುಬಾರತದೊಳ್ ಕೇಳ್ದರಿಯಾ ? ಕೀಚಕ ವಧಾನಂತರದ ಮರುದಿವಸಂ ಇರು ಳೊಳ್ ಅಗ್ನಿಪುತ್ರಿಕೆ ಸೇಳಂದ್ರಿ, ತನ್ನ ಪ್ರಿಯತಮನಂ ಸಂತೈಸಲೆಂದು ಬಾಣಸುವನೆಗೆ ಪೋದಳ್. ಅಲ್ಲಿ ಬಲ್ಲವಂ, ಲೊಟಕನೆ ಜಿಹ್ವೆಯಂ ಚಪ್ಪರಿಸುತ್ತಂ, ನೀಳಾಚಳ ದಂದದ ಮೈಯನೊಲೆಯುತಂ, ನೇತ್ರದೊಳ್ ಜಲವರ್ಷಮುಂ ಕಲೆಯುತ್ತಂ, ಸೊಗದ ಸುಗ್ಗಿಯೊಳಿರ್ದಂ. ಆಗಳ್ ಬಲ್ಲವನಿರವಂ ಮೀಗಲೋಚನೆ ದುರುಪದಿ ಕಂಡು "ಏನಿದೇನಿದು ರಮಣಾ ಇಂತುಗರವಡೆದಂತಿರ್ಪೈ. ಸವಾದಿ ರವನಿಸಿತೇಂ" ಎಂದು ಬೆಸಗೊಂಡಳ್. ಆಗಳಾ ಬಕಾಂತಕ ನಿಂತೆಂದಂ "ಎಲೆ ತರಳಾಕ್ಷಿ, ಎನ್ನಂಪಂಗಿಸಿ ಪಿಂಗಳೆಯದಿರ್. ನಾನೀಗ ಸವಿಯುತಿರ್ಪ ವಿನತಾ ತನುಜ ಚೂರ್ಣಮುಂ ಫೀನುಂ ಚಪ್ಪರಿಸಿದಾಗಳ್ ನಿನಗಿದರ ರಹಸ್ಯಂ ತಿಳಿವುದು"- ಎಂಬುದು ಮಾಕಾಂತೆ "ಕಾಂತ! ಈ ಚರ್ಣದ ಮೂಲವುಂ ಮೇಣ್ ಮಹಾತ್ಮೆಯಂ ಪೇಳ!" ಎನೆ ಕಿರ್ಮೀರಾರಿ "ಎಲೆ ಅಗ್ನಿಪುತ್ರಿ, ರಾಘವ ಧಾನ್ಯವುಂ ವಾರಿಯೊಳ್ತೊಯ್ಸಿ, ಪುರಿ ದರಳಂ ಬೀಸಿ, ಆ ಪಿಷ್ಟಕೆ, ಲವಣಮುಂ, ಘೃತಮುಂ, ಮೆಣಸಿನ ಪುಡಿಯುಂ ಪವಣರಿತು ಬೆರಸೆ ಬರ್ಪ ಚೂರ್ಣವೆ ಗರುಡಚೂರ್ಣಂ. ವಿನತೆ, ಮಾತಾಯಿ, ಈಯೆ ಈ ಚೂರ್ಣಮನುಂಡು ಗರುಡಂ, ಅಮೃತಮುಂ ತಂದಗಡ; ತಾಯ ಸೆರೆಯಂ ಪರಿದಗಡ ಕೀಳ್ಕೆಲದರಂ ತರಿದಗಡ ; ವಿಷ್ಣುವಿಗಿದಂ ಲಂಚಮನಿಕ್ಕಿ ತಾಂ ಸಾರೂಪ್ಯ ಮುಕ್ತಿಯಂ ಪಡೆದಗಡ; ಗೋವಳನ ಗೀತೆಯ ವಿಭೂತಿ ಯೋಗಾಧ್ಯಾಯದೊಳ್ ಚೂರ್ಣದೊ ಳಾಂ ಗರುಡ ಚೂರ್ಣ ಮೆಂಬ ಮಹಾವಾಕ್ಯ ಮಿರ್ಪುದೇ ಇದರ ಪಿರಿಮೆಗೆ ಸಾಕ್ಷಿ ಗಡ! ಈ ಚೂರ್ಣಮುಂ ಬಾಯೊಳ್ ಪಾಕೆ, ಇದಂಗಳಿಗೆ ಪತ್ತಿ ಕಣ್ಣೊಳ್ ಸುಖ ಜಲಮುಂ ತರ್ಪುದು. ಕೇಳ ಸೇಳಂದ್ರಿ ಇದರೊಳಿರ್ಪ ರಾಘವಧಾನ್ಯದಿಂ ಮತಿಯುಂ ಘೃತದಿಂ ಧೃತಿಯುಂ, ಲವಣದಿಂ ಅಸ್ತಿಭದ್ರತೆಯುಂ, ಅಕ್ಕುಂ. ಇದಂ ಅನುಗಾಲಂ

ತಿಂದವನಮರಂ" ಎಂದು ದುರುಪದಿಯುಂ ಸಂತೈಸಿದಂ. ಎನಲ್ ಎಲೆ ಮುದ್ದಣ ಗುವರ ಗರುಡಚೂರ್ಣ ಮೇಂ ಸಾಮಾನ್ಯಮೇ"

ಬಳಿಕಲಾ ಕವಿಕುಲ ಲಲಾಮಮಂ ಚೂರ್ಣಮಂ ತಿಂದು ಕೃತಾರ್ಥನಾದಂ. ಇಂತೀರ್ಪಟ್ಟ ಗರುಡಚೂರ್ಣ ಮಹಾತ್ಮ್ಯವ ನಾಹನೋದಿ ಯರಿವಂ, ಅವಂ, ರಸ ನಾಮೃತಮೆಂಬ ಸಗ್ಗಮನೈದಿ ಚಿರಕಾಲ ಮಿರ್ಪನಿದು ನಿಕ್ಕುವಂ.

ಎಂಬಲ್ಲಿಗೆ ಮರುಳ್ಗನ್ನಡಿಗರಡಿ[illegible]ರೆಗಳ ಸರೋವರದಂತಿರ್ಪ ಕನ್ನಡಕಾವ್ಯ ಸರೋರುಹ ಷಂಡ ದೋರ್ದಂಡ; ಚ್ಚು, ಚ್ಚು, ತ್ಸು, ಮುಂದೇನು ಬರೆಯಲಪ್ಪಾ? ಶ್ರೀರಾಮ ಚಂದಿರಾ? ಪುಂಡರೀಕ! [illegible]ಲೆ???

ತಲೆಕಾಯಿ

"ವಿಳ್ಳುಪುರಂ ಸಮೀಪದ ಕಾಡಿನಲ್ಲಿ ತಲೆಯಿಲ್ಲದ ದೇಹವೊಂದು ಪೋಲೀಸಿನವರಿಗೆ ಸಿಕ್ಕಿದೆ." (ಸುದ್ದಿ).

ಅದೇನು ಮಹಾ! ನಮ್ಮೂರಿನಲ್ಲಿ ಬೇಕಾದಷ್ಟು ಸಿಗುತ್ತವೆ.

* * *

ಕಾರ್ಯದರ್ಶಿ ಭಾಷಣ ಮಾಡಲು ಕರೆದಾಗ "ನನ್ನ ತಲೆಯಲ್ಲಿ ಈ ಪೊತ್ತು ಏನೇನೂ ಇಲ್ಲವಯ್ಯ ಮನಸ್ಸು ಯಾಕೋ ಖಾಲಿಯಾಗಿದೆ" ಎಂದು ರಾಯರು ಪೇಚಾಡಿದರು.

"ಹಾಗಿದ್ದಲ್ಲಿ ತಮಗಿಂತ ಯೋಗ್ಯರು ಬೇರೆ ಯಾರು ಸಿಗುತ್ತಾರೆ ಸಾರ್!"— ಎಂದು ಕಾರ್ಯದರ್ಶಿ ಹಲ್ಲು ಕಿರಿದ.

“ಪ್ರಿಯ ಮ್ಮಾ!”

ಪ್ರಿಯಮ್ಮಾ,

ಈ ಊರಿಗೆ ಬಂದು ಕಾಲೇಜ್ ಹಾಸ್ಟೆಲ್ ಸೇರಿದ ವಿಷಯ ಅಪ್ಪ ನಿನಗೆ ಹೇಳಿರಬೇಕು. ಮೊದಲು ಒಂದೆರಡು ದಿನ ನನಗೆ ಬೆಕ್ಕುಬೆರಗಾಗಿ ನೋಡುವಂತೆ ಆಗಿತ್ತು. ಆದರೆ ಈಗ ಎಲ್ಲಾ ಸರಿಹೋಗಿದೆ. ನೀನು ಹೋದಸಲ ಬರೆದ ಕಾಗದದಲ್ಲಿ ನಿನ್ನ ಸ್ನೇಹಿತೆಯರ ವಿಷಯ ಬರೆದು ತಿಳಿಸು ಎಂದು ಹೇಳಿದ್ದಿ. ಈ ಕಾಗದದಲ್ಲಿ ಅದನ್ನೇ ಮಾಡಲೆತ್ನಿಸುತ್ತೇನೆ. ಈ ದಿನ ಮಧ್ಯಾಹ್ನ ಲೆಕ್ಕದ ಮೇಡಂ ರಜಾ ತೆಗೆದುಕೊಂಡಿದ್ದಾರೆ, ಕೆಮಿಸ್ಟ್ರಿ ಲೆಕ್ಚರರ್ ಕಮಿಟಿ ಮೀಟಿಂಗಿಗೆ ಹೋಗಿದ್ದಾರಾಗಿ ಪಾಠ ಇಲ್ಲ. ಕನ್ನಡದ ಮಾಸ್ತರು ಯಾರೋ ಅಧಿಕಾರಿಗಳ ಭಾಷಣವನ್ನು ಕನ್ನಡಕ್ಕೆ ಜರೂರಾಗಿ ತರ್ಜುಮೆ ಮಾಡಬೇಕಂತೆ. ಕಾರಣ ಪ್ರಿನ್ಸಿಪಾಲರ ಕೊಠಡಿಯಲ್ಲೇ ಮಧ್ಯಾಹ್ನ ಎರಡು ಗಂಟೆಯಿಂದ ಗೂಟ ಬಡಿದ ಹಾಗೆ ಕೂತಿದ್ದಾರೆ. ಹಾಗಾಗಿ ಮಧ್ಯಾಹ್ನವೆಲ್ಲಾ ರಜಾ. ತಾರೀಖು ೨೬ ಆದ್ದರಿಂದ ಎಲ್ಲರೂ ಹಾಸ್ಟೆಲಿನಲ್ಲೇ ಇದ್ದೇವೆ. ವಿರಾಮ ತುಂಬಾ ಇದೆ. ನೀನು ಕೇಳಿದ್ದನ್ನು ಬರೆಯಲು ಇದೇ ಸರಿಯಾದ ಕಾಲ.

ನನ್ನ ಕೊಠಡಿಯಲ್ಲಿ. ಜೇಬುನ್ನಿಸಾ ಎಂಬ ಹುಡುಗಿ ಇದ್ದಾಳೆ. ನಮ್ಮ ಮಂಜರಾಬಾದ್ ಪಿಂಜಾರಿ ಹಾಕುಲ್ಲವೇ ದೊಗಲೆ ಷರಾಯಿ. ಅಂತಹುದನ್ನೇ ಅವಳೂ ಹಾಕುತ್ತಾಳೆ. ಆದರೆ ಬಟ್ಟೆ ಮಾತ್ರ ಅಚ್ಚ ಕೆಂಪಿನ ಅಥವಾ ನೀಲಿಯ ಅಥವಾ ಹಸುರಿನ ನಯವಾದ ಕಿಂಕಾಬಿನಂತಹ ಬಟ್ಟೆ. ಮುಟ್ಟಿದರೆ ನುಣುಪಾಗಿದೆ ಥಳಿ ಥಳಿಸುತ್ತದೆ. ಆದರೆ ಕಣ್ಣು ಕೋರೈಸಿ ಹೋಗುತ್ತದೆ. ಅವಳು ನೇರನಾಗಿ ಬೈತಲೆ ತೆಗೆದು ಕೊಳ್ಳುತ್ತಾಳೆ. ಆದರೆ ಹಣೆಯ ಎರಡೂ ಕಡೆ ಎರಡು ಗುಂಗುರುಗಳು ಬರುವಂತೆ ಹೇಗೋ ಮಾಡಿ ಎರಡು ಜಡೆ ಹಾಕಿ, ಅವೆರಡೂ ಭುಜದ ಮೇಲೆಳೆದು ಎದೆ ಮೇಲೆ ಹರಿಯುವಂತೆ ಮಾಡುತ್ತಾಳೆ. ನಮ್ಮ ಮಂಜರಾಬಾದಿನಲ್ಲಿ ಗೌರಮ್ಮನ ಹಾಗೆ ನುಣಪಾಗಿ ತಲೆ ಬಾಚುವುದೇ ಚೆನ್ನ ಎಂದು ಕೊಂಡಿತ್ತಿಲ್ಲವೇ? ಆದರೆ ಇವಳ ಎದ್ದ ಗುಂಗುರು ಕೂದಲೂ, ಚೆನ್ನಾಗಿಯೇ ಕಾಣಿಸುತ್ತದೆ. ಜಡೆ ಬೆನ್ನಿನಮೇಲೆ ಹರಿದರೆ ಚೆನ್ನ ಎಂದಲ್ಲವೇ ನಮ್ಮೂರಿನಲ್ಲಿ ಇವಳ ಇಜ್ಜೋಡಿ ಜಡೆ ಎದೆ ಮೇಲೆ

ಎರಡೂ ಕಡೆ ಹರಿದಾಡಿದರೆ ಅದೂ ಚೆನ್ನಾಗಿಯೇ ಕಾಣಿಸುತ್ತದೆ. ಜಡೆ ತುದಿಗೆ, ಗಾಳಿ ಪಟಕ್ಕೆ ಬಾಲಂಗೋಚಿ ಕಟ್ಟುವುದಿಲ್ಲವೇ ಹಾಗೆ, ರಿಬ್ಬನ್ ಕಟ್ಟುತ್ತಾಳೆ, ದೃಷ್ಟಿ ಪರಿಹಾರಮಾಡುವಂತೇ ಅವು ಕಾಣುತ್ತವೆ.

ಕಾಮನ ಹಬ್ಬದ ಹೊತ್ತಿಗೆ ನಾವೆಲ್ಲಾ ನಮ್ಮ ಹಳ್ಳಿಯಲ್ಲಿ ಗೋರಂಟಿ ಹಚ್ಚು ತ್ತಿದ್ದುದು,—ಕಾಲುಗುರುಗಳಿಗೆ—ನಿನಗೆ ಜ್ಞಾಪಕ ಇರಬಹುದು. ಈ ಊರಲ್ಲಿ ಇವಳು ಅಂಗಡಿಯಲ್ಲಿ ಕೊಂಡು ತರುತ್ತಾಳೆ ಆ ಗೋರಂಟಿ ಬಣ್ಣವನ್ನು. ಅದನ್ನು ಕಾಲು ಉಗುರುಗಳು ಮಾತ್ರವೇ ಅಲ್ಲ! ಕೈ ಬೆರಳುಗಳ ಉಗುರುಗಳಿಗೂ ಹಚ್ಚಿ ಕೊಳ್ಳುತ್ತಾಳೆ. ದಿನಾಗಲೂ ಮುಖ ತೊಳೆದುಕೊಂಡು ಬಂದ ಮೇಲೆ ಉಗುರು ಗಳಿಗೆ ಈ ಬಣ್ಣ ಹಚ್ಚುತ್ತಾಳೆ. ನಾನು ನಿನ್ನೆತಾನೇ ಹೇಳಿದೆ, ಏನೇ ಜೇಬೂ! ನಾವು ಕಾಮನ ಹಬ್ಬಕ್ಕೆ ಮಾತ್ರ, ಕಾಲಿಗೆ ಮಾತ್ರ ಈ ಶೃಂಗಾರ ಮಂಜರಾಬಾದಿ ನಲ್ಲಿ ಮಾಡುತ್ತೇವೆ. ನೀನು ದಿನಾಲೂ ಕಾಮನ ಹಬ್ಬ ಮಾಡ್ತೀಯಲ್ಲಾ! ಯಾಕೆ? ಎಂದು ಅವಳಂದಳು. ಸಾಯುವ ತನಕ ದಿನಾಲೂ ಈ ಹಬ್ಬ ಆಚರಿಸಬೇಕು ಎಂದೇ ನನ್ನ ಆಶೆ ಅಂತ. ನನಗೆ ಏನೂ ಅರ್ಥವೇ ಆಗಲಿಲ್ಲ. ಅದಕ್ಕೋಸ್ಕರ ಸುಮ್ಮನಾದೆ.

ನಾನು ಹುಡುಗಿ ಆಗಿದ್ದಾಗ, ಪರಕರ ಹಾಕ್ಕೊಂಡು ಮಂಜರಾಬಾದ್ ಶಾಲೆಗೆ ಹೋಗುತ್ತಿದ್ದಾಗ, ನೀನು ಬುಗುಡಿ ಕಟ್ಟಿದ ಕಾಲು ಬಳೆ ಹಾಕಿದ್ದು ಜ್ಞಾಪಕ ಇದೆಯೇ? ರಸ್ತೇಲಿ ನಡೆದುಹೋದಾಗ ಝಿಲ್ ಝಿಲ್ ಅಂತ ಶಬ್ದ ಆಗುತ್ತಿರ ಲಿಲ್ಲವೇ? ಅಂತಹಾ ಬಳೆಯನ್ನು ಈ ಜೇಬುನ್ನಿಸಾ ಬಲಕೈಗೆ ತೊಟ್ಟಿದ್ದಾಳೆ. ಎಡಗೈ ಬಿಡುಗೈಯಾದರೂ ಒಂದು ಸಣ್ಣ ಗಡಿಯಾರ ಕಟ್ಟಿದ್ದಾಳೆ. ಆ ಗಡಿಯಾರವೇ ಕಾಣಿಸೋದಿಲ್ಲ ಅಂದ ಮೇಲೆ ಅದರಲ್ಲಿ ವೇಳೆ ಏನಾಗಿದೆ ಎಂದು ಗೊತ್ತುಮಾಡಲು ಸೂರ್ಯನನ್ನೇ ನೋಡಬೇಕು. ಆದರೂ ನಡೆಯುವಾಗ ಬಲಗೈಯನ್ನು ಒಂದು ರೀತಿಯಾಗಿ ಕುಣಿಸುತ್ತಾ ನಡೆಯುತ್ತಾಳೆ. ಝಿಲ್ ಝಿಲ್ ಶಬ್ದ ಕೇಳಿಸುತ್ತದೆ. ನೀನು ಹೇಳುತ್ತಾ ಇದ್ದೆ. ಕಾಲು ಬಳೆ ಆ ಶಬ್ದ ಮಾಡಿದರೆ ಹಾದಿಯ ಹತ್ತಿರ ಇರುವ ನಾಗರಹಾವು ಹುಷಾರಾಗುತ್ತದೆ ಎಂದು. ಹಾದಿಯಲ್ಲಿ ಹೋಗುವ ನಾವು ಕ್ಷೇಮ ಎಂದು. ಆದರೆ ಈ ಬಲಕೈ ಬಳೆಯ "ಝಿಲ್ ಝಿಲ್" ಈ ಷಹರಿನಲ್ಲಿ ಯಾವ ನಾಗರಹಾವನ್ನು ಹುಷಾರುಗೊಳಿಸುತ್ತದೋ ಅರಿಯೆ?

ಕಾಲಿಗೆ ಜರತಾರಿ ಚಪ್ಪಲಿ ಧರಿಸುತ್ತಾಳೆ. ಅದನ್ನು ನೋಡಿದರೇ ಇಷ್ಟು ಚೆನ್ನಾಗಿದೆ. ಟ್ರಂಕಿನಲ್ಲಿಟ್ಟು ಕಾಪಾಡೋಣ ಎನ್ನಿಸುತ್ತದೆ. ಅಂತಹದನ್ನು ಕಾಲಿಗೆ ಹಾಕಿಕೊಂಡು ನಡೆಯುತ್ತಾಳೆ. ನಮ್ಮ ಮಂಜರಾಬಾದಿನಲ್ಲಿ ಬರೀ ಕಾಲಿನಲ್ಲಿ ಓಡಾಡಿದಾಗ ಪಾದದ ತಳವೆಲ್ಲಾ ಮರಗಟ್ಟಿಹೋಯಿತು. ಆದರೆ ಜೇಬುನ್ನಿಸಾ

ಈ ಜರತಾರಿ ಪಾದರಕ್ಷೆ ಉಪಯೋಗಿಸಿದ ಮೇಲೆ ಈಗ ಪಾದದ ತಳದಲ್ಲಿ ಅಲ್ಲಲ್ಲೇ ಮರಗಟ್ಟಿಹೋಗಿದೆ. ಇಲ್ಲಿ ಅಲ್ಲಿ ಮರಗಟ್ಟಿದರೆ ನಡೆಯುವಾಗ ಬಲು ನೋವಾಗುತ್ತಂತೆ. ಆದಕ್ಕಾಗಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ತೆಗೆದುಕೊಳ್ಳುತ್ತಿದ್ದಾಳೆ.

ನಾನೊಂದು ದಿನ ಅವಳ ಪಾದರಕ್ಷೆ ಹಾಕಿಕೊಂಡು ನಡೆಯಲು ಪ್ರಯತ್ನಿಸಿದೆ. ಜೇಬುನ್ನಿಸಾ ನಕ್ಕು ನಕ್ಕು ಸುಸ್ತಾದಳು. "ಅಲ್ಲಾ! ಕಮ್ಮು ನೀನು ಈ ಪಾದರಕ್ಷೆ ಹಾಕಿಕೊಂಡು ನಡೆದರೆ ಅಡೇ ಭರ್ತ ನಾಟ್ಯವಾಗುತ್ತೆ ಕಣೇ" ಎಂದಳು. ನನಗೂ ಅದು ದಿಟ ಅನ್ನಿಸಿತು ಬೇಪೆ ಬಂದೋರು ನಡೆದ ಹಾಗೇ ನಾನೂ ನಡೆದೆ ಎಂದೆನ್ನಿಸಿತು.

ಜೇಬುನ್ನಿಸಾ ಚೆನ್ನಾಗಿ ಕನ್ನಡ ಮಾತಾಡುತ್ತಾಳೆ. ಆದರೂ ಒಮ್ಮೊಮ್ಮೆ "ಯಾಕೋ ಕಮ್ಮು ಈ ದಿನ ತಲೆನೋವು ಬಲಗಡೆ ಬಂದಿದಾನೆ" ಹೊಟ್ಟೇಲಿ ಏನೋ ಸಂಕಟ ಓಡಾಡ್ತಿದ್ದಾನೆ" ಎಂದು ಹೇಳ್ತಾಳೆ. ಎರಡು ನಿಮಿಷ ಅರ್ಥವಾಗುಲ್ಲ ಆಮೇಲೆ ತಿಳಿಯುತ್ತೆ, "ಇಷ್ಟೇ! ಅವಳ ಕಷ್ಟ" ಅಂತ. ಆದರೂ ಹೆಂಗಸಿಗೆ ಬಂದ ನೋವು ಸಂಕಟ ಎಲ್ಲಾ ಗಂಡು ಎಂದನ್ನುವ ಅವಳ ಕನ್ನಡ ಯಥಾರ್ಥವೇನೋ ಎನ್ನಿಸುತ್ತದೆ ನನಗೆ.

ಚೆನ್ನಾಗಿ ಪಾಠ ಓದುತ್ತಾಳೆ. ಕ್ಲಾಸಿನಲ್ಲಿ ಅವಳೇ ಮೊದಲು. ಅಂದಮೇಲೆ ನಾನೂ ಚೆನ್ನಾಗಿ ಉತ್ತೀರ್ಣಳಾಗಿ ನಿನ್ನ ಮನಸ್ಸನ್ನು ಸಂತೋಷಪಡಿಸುತ್ತೇನೆ ಎಂಬ ಧೈರ್ಯ ಇದೆ.

ನೀನು, ಅಪ್ಪಾ, ಮಕ್ಕಳೂ ಎಲ್ಲರೂ ಚೆನ್ನಾಗಿದ್ದೀರೆಂದು ನಂಬಿದ್ದೇನೆ. ಇಲ್ಲಿ ನಾನು ಸುಖವಾಗಿದ್ದೇನೆ.

ಮುಂದಿನ ಸಾರಿ ನನ್ನ ಪಕ್ಕದ ಕೋಣೆಯ ಸ್ನೇಹಿತಳ ವಿಷಯ ಬರೆಯುತ್ತೇನೆ.

ನಿನ್ನ ಒಲವಿನ ಮಗಳು,

ಕಮ್ಮು.

ಸ್ವಾತಂತ್ರ್ಯದ ಸುಖದ ಏಟು !

—— o ——

ಬಹಳ ದಿನಗಳಾಗಿತ್ತು, ನಾನು ಅವನನ್ನು ನೋಡಿ. ಒಳ್ಳೆ ಪೈಲ್ವಾನನ ಹಾಗಿದ್ದ ಆಳು ಗುಬ್ಬಚ್ಚಿ ತರಹ ಆಗಿಬಿಟ್ಟಿದ್ದ. ಹಾಕಿದ್ದ ಬಟ್ಟೆಗಳು ಮೈಮೇಲೆ ಜೋಲಾಡುತ್ತಿದ್ದುವು. ಮುಖ ಕಪ್ಪಾಗಿ, ಕರುಗಡಿಬಿನ ಹಾಗೆ ಊದಿದ್ದ ಕೆನ್ನೆಗಳು ಗುಳಿಬಿದ್ದು ಬಿಟ್ಟಿದ್ದವು.

ಗಾಭರಿಯಿಂದ "ಏನು ಖಾಯಿಲೆ, ಸೋಮಣ್ಣ! ಏಕೆ ಹೀಗಾಗಿ ಬಿಟ್ಟಿದ್ದಿ? ಡಾಕ್ಟರಿಗೆ ಯಾರಿಗಾದರೂ ಮೈ ತೋರಿಸಿದೆಯಾ ?" ಎಂದೆ.

ಸೋಮಣ್ಣನು ನಿಮಗೇ ತಿಳಿದಿರಬಹುದು. "ಸ್ಥಾನ ಬಲ" ಇತ್ಯಾದಿ ತತ್ವಗಳನ್ನು ಪ್ರತಿಪಾದಿಸಿ "ಪ್ರಾಕ್ಟಿಕಲ್ ಫಿಲಾಸಫರ್" (practic il philosopher) ಎಂದು ಖ್ಯಾತಿಗಳಿಸಿದ್ದ ನಮ್ಮ ಗೆಳೆಯ. ಸ್ವಾತಂತ್ರ್ಯ ಸಮರದಲ್ಲಿ ಹೋರಾಡಿ, ಜೈಲಿಗೆ ಹೋಗಿ, ಮೈ·ತೂಕ ಮೂವತ್ತು ಪೌಂಡು ಏರಿದರೂ, ಶ್ರಮಪಟ್ಟು ಬ್ರಿಟಿಷರನ್ನು ಭಾರತದಿಂದ ಓಡಿಸಿದ ವೀರಾಗ್ರಣಿಗಳಲ್ಲಿ ಪ್ರಥಮ ಶ್ರೇಣಿಯವನು, ಅಥವಾ ಅವರ ಹತ್ತಿರ—ಬಹಳ ಹತ್ತಿರದವನು ಎಂದು ಹೇಳಿದರೇನೂ ಅತಿಶಯೋಕ್ತಿಯಾಗಲಾರದು.

ಸೋಮಣ್ಣನು ನಿಟ್ಟುಸಿರುಬಿಡುತ್ತಾ "ಡಾಕ್ಟರ್ ಕೈಯಿಂದ ಮೊನ್ನೆ ತಾನೆ ತಪ್ಪಿಸಿಕೊಂಡು ಬಂದೆನಪ್ಪಾ!" ಎಂದ

"ಇದೇನಯ್ಯಾ, ಯಾವ ಡಾಕ್ಟರು, ಏನು ಖಾಯಿಲೆ ?" ಎಂದೆ.

"ಒಬ್ಬ ಡಾಕ್ಟರಲ್ಲಪ್ಪಾ, ನಲವತ್ತು ಡಾಕ್ಟರು! ಆಸ್ಪತ್ರೆ! ಎರಡು ತಿಂಗಳು!" ಎಂದ.

ಸೋಮಣ್ಣನು ಹಾಸ್ಯಪ್ರಿಯ ಎಂದು ಅವನ ಸ್ನೇಹಿತರೆಲ್ಲರೂ ಹೇಳುತ್ತಾರೆ. ಆದರೆ ಬಹಳ ತಿಳಿಯಾದ ಹಾಸ್ಯ. ಇದೆಯೋ ಇಲ್ಲವೋ ಎನ್ನುವ ಹಾಗೆ. ಕೊಂಡ ಹಾಲಿನಂತೆ. ಆ ಹಾಸ್ಯದ ಕೆನೆಯನ್ನು ಕಂಡುಹಿಡಿಯಬೇಕಾದರೆ ನನ್ನಂಥ ಮಂದ ಬುದ್ಧಿಗೆ ಸ್ವಲ್ಪ ಕಷ್ಟವೇ.

"ಆಸ್ಪತ್ರೆಗೆ ಏಕೆ ಹೋಗಬೇಕಾಯಿತು" ಎಂದು ಕೇಳಿದೆ. ಸೋಮಣ್ಣನು ಆಸ್ಪತ್ರೆಯಿಂದ ಗೆದ್ದು ಬಂದದ್ದು ಇದು ಎರಡನೇ ಸಾರಿ ಹಿಂದೆ ಒಂದು ಸಲ ಲಾರಿಯೊಂದಕ್ಕೆ ಸಿಕ್ಕಿ ಪಾಡುಪಟ್ಟಿದ್ದ.

"ಅಯ್ಯೋ, ಅದೇನು ಹೇಳಲಿ, ಆಪರೇಷನ್ ಆಗಬೇಕಾಯಿತಪ್ಪಾ!" ಎಂದು ಮತ್ತೆ ನಿಟ್ಟುಸಿರು ಬಿಡುತ್ತಾ" ಎಲ್ಲಾ ನನ್ನ ತಪ್ಪು! ಈ ಸ್ವಾತಂತ್ರ್ಯದ ಫಲ!" ಎಂದ.

"ನಿನ್ನ ತಪ್ಪು! ಸ್ವಾತಂತ್ರ್ಯದ ಫಲ! ನನಗೇನೂ ಅರ್ಥವಾಗುವುದಿಲ್ಲವಲ್ಲ, ವಿಶದವಾಗಿ ಹೇಳಬಾರದೆ? ಅಲ್ಲದೆ, ಯಾವಾಗಲೂ ರಾಕು ಠೀಕಾಗಿ ಬಟ್ಟೆ ಹಾಕುತ್ತಿದ್ದ ನೀನು, ಈ ವೇಷದಲ್ಲೇನು ಮಾಡುತ್ತಿದ್ದಿ? ಬಟ್ಟೆಗಳೆಲ್ಲಾ ಹರಿದು ಜೋಲಾಡುತ್ತಿವೆ. ಮಾಸಲು" ಎಂದೆ.

"ನೋಡು ಬೀರಣ್ಣ, ಮೊದಲಿನ ಸೋಮಣ್ಣನಾಗಿಲ್ಲ ನಾನು. ಮನೆ ಮಠ ಎಲ್ಲಾ ಮಾರಿದೆ. ಬಹಳ ಕಷ್ಟದಲ್ಲಿದ್ದೇನೆ. ಉಣ್ಣೋಕೆ ಉಡೋಕೆ ತಾಪತ್ರಯ" ಎಂದ.

ನನಗೆ ಬಹಳ ವ್ಯಸನವಾಯಿತು. ಅವನು ಸ್ವತಂತ್ರ ಕಾಳಗದಲ್ಲಿ ಜಯಶೀಲನಾದ ಮೇಲೆ ಒಂದಿಲ್ಲ ಒಂದು ದಿನ ಮಂತ್ರಿಯ ಪೀಠವನ್ನು ಹತ್ತಿಯೇ ಹತ್ತುವನೆಂದು ಭಾವಿಸಿದ್ದ ನನಗೆ ಅವನ ಸ್ಥಿತಿಯನ್ನು ಕೇಳಿ ಸಂಕಟವಾಯಿತು.

"ಏನು ವಿಚಾರ, ವಿಸ್ತರಿಸಿ ಹೇಳಬಾರದೆ?" ಎಂದು ಮತ್ತೆ ಕೇಳಿದೆ.

"ಒಂದು ಲೋಟ ಕಾಫಿ ಕೊಡಿಸು, ಹೇಳುತ್ತೇನೆ" ಎಂದ.

ಹತ್ತಿರವೇ ಇದ್ದ ಬ್ರಹ್ಮೇಂದ್ರ ಭವನಕ್ಕೆ ನುಗ್ಗಿದೆವು. ಹಲ್ವ, ಇಡ್ಲಿ, ಕಾಫಿ ಮುಂದೆ ಬಂದ ಮೇಲೆ ಸೋಮಣ್ಣನು ಹೇಳಿದ.

"ನೋಡು, ಸ್ವಾತಂತ್ರ್ಯವನ್ನು ಸಂಪಾದಿಸುವುದಕ್ಕೆ ಎಷ್ಟು ಕಷ್ಟಪಟ್ಟೆ, ನಿನಗೆ ಗೊತ್ತೇ ಇದೆ. ಸತ್ಯಾಗ್ರಹ ಮಾಡಿ, ಜೈಲು ಸೇರಿದೆ. ಅಲ್ಲಿನ ಕಷ್ಟಗಳನ್ನೆಲ್ಲಾ ಸಹಿಸಿ, ನನ್ನ ಮನಸ್ಸಿನ ಪ್ರಭಾವದಿಂದಲೋ ಎಂಬಂತೆ ನೂರಿಪ್ಪತ್ತು ಪೌಂಡು ತೂಕದಿಂದ ನೂರೈವತ್ತಕ್ಕೆ ಏರಿದೆ. ಆಗದವರು ಅಲ್ಲಿ ನಾವು ಜುಲುಮಿನಿಂದ ಆಗಿನ ಸರ್ಕಾರದ ಲೆಖ್ಖದಲ್ಲಿ ತರಿಸಿ ತಿನ್ನುತ್ತಿದ್ದ ಹಲ್ವ, ಹಾಲುಖೋವ ಇತ್ಯಾದಿಗಳಿಂದ ಎಂದು ಹೇಳಬಹುದು. ಆದರೆ, ಅದು ನಮ್ಮ ಮನಸ್ಥೈರ್ಯದಿಂದ ಎಂದು ನಾನು ಹೇಳುತ್ತೇನೆ. ಅಷ್ಟು ತೂಕದಿಂದಲೂ ಹೋರಾಡಿ, ಕೊನೆಗೂ ಬ್ರಿಟಿಷರನ್ನು ಭಾರತದಿಂದ ಅಟ್ಟಿದೆವು. ಸ್ವಾತಂತ್ರ್ಯ ಬಂತು. ನಮ್ಮದೇ ಸರ್ಕಾರ ಇತ್ಯಾದಿ. ಜೈಲಿನಿಂದಲೂ ಹೊರಗೆ ಬಂದೆವು. ಅದಾದ ಮೇಲೆ ನಡೆದಿರುವ ವಿಚಾರಗಳು ನಿನಗೆ ತಿಳಿದೇ ಇವೆ. ಜನತೆಯ ಜೀವನದ ಮಟ್ಟ ಏರಿತು. ರೂಪಾಯಿಗೆ ಎಂಟು

ಸೇರಾಗಿಬಿಟ್ಟಿದ್ದ ಅಕ್ಕಿ, ಒಂದೂವರೆ ಸೇರಿಗೆ ಇಳಿಯಿತು. ಕಾರ್ಮಿಕನ ಕೈಲಿ ನಿಕ್ಕಲ್ ನಾಣ್ಯ, ಕಾಗದದ ನೋಟು ಓಡಾಡತೊಡಗಿದವು. ಅವನು ಏನೇ ತಿನ್ನಲಿ, ಬಿಡಲಿ, ಪಾಪ, ಆರು ತಿಂಗಳಿಗೊಮ್ಮೆ ಕೂಡ ಸಾಧ್ಯವಿಲ್ಲದಿದ್ದ ಸಿನೀಮಾ, ಅವನಿಗೆ ವಾರಕ್ಕೆ ಮೂರು ಸಲ ಲಭಿಸತೊಡಗಿತು. ಅವನ ಹೆಂಡತಿ ಸಿನಿಮಾ ತಾರೆಯರ ಹಾಗೆ ಪೌಡರ್, ಸ್ನೋ ಇವೆಲ್ಲಾ ಹಾಕಿಕೊಳ್ಳುವ ಹಾಗಾಯಿತು. ಇದನ್ನೆಲ್ಲಾ ನೋಡಿ ಹಿಗ್ಗುತ್ತಿದ್ದ ನನ್ನ ಸ್ಥಿತಿಯೇಕೋ ದಿನ ದಿನಕ್ಕೆ ಇಳಿಯುತ್ತಾ ಬಂತು ಕಾಳಸಂತೆ ವ್ಯಾಪಾರ, ಲಂಚ ಇವುಗಳ ಅರಿವಿಲ್ಲದ ಮುಠ್ಠಾಳ ನಾನು ಅಪ್ಪ ಇಟ್ಟಿದ್ದ ಆಸ್ತಿಯನ್ನೆಲ್ಲಾ ಮಾರಿದೆ. ನನಗೆ, ನನ್ನ ಸಂಸಾರಕ್ಕೆ ಹೊಟ್ಟೆಗೆ ಬಟ್ಟೆಗೆ ಕಷ್ಟವಾಗಹತ್ತಿತು.

ಹೀಗಿರುವಲ್ಲಿ ಮೊನ್ನೆ ಆಗಸ್ಟ್ ಹದಿನೈದರ ಸ್ವಾತಂತ್ರ್ಯೋತ್ಸವ ಬಂತಷ್ಟೆ. ಆವತ್ತು, ನಮ್ಮ ಕಷ್ಟಗಳನ್ನೆಲ್ಲಾ ಮರೆತು ಸ್ವಲ್ಪವಾದರೂ ವಿನೋದವನ್ನನುಭವಿಸೋಣ ಎಂದು ಹೆಂಡತಿಯನ್ನೂ ಮಕ್ಕಳನ್ನೂ ಕಟ್ಟಿಕೊಂಡು ಸಾಯಂಕಾಲ ಕೆರೆ ಅಂಗಳದಲ್ಲಿ ಬಾಣಬಿರುಸು ನೋಡುವ ಎಂದು ಹೊರಟೆ. ಸೇಠ್ ಹತ್ತಿರ ಸಾಲ ತಂದು ಪಾಯಸ ಮುಂತಾಗಿ ಮಾಡಿಸಿದ್ದೆ. ಆ ಊಟ ಅರಗಲಿ ಎಂದು ಎಲ್ಲರನ್ನೂ ನಡೆಸಿಕೊಂಡೇ ಹೋದೆ. ಯಾರಿಗೂ ತಿಳಿಯದ ಹಾಗೆ ಗುಂಪಿನ ಹೊರಗಡೆಯಲ್ಲಿಯೇ ನಿಂತೆವು. ಏಕೆಂದರೆ, ಮಂತ್ರಿಗಳು, ಅಧಿಕಾರಿಗಳು ಯಾರಾದರೂ ನೋಡಿಬಿಟ್ಟರೆ, "ಓಹೋ, ನಮ್ಮ ಜತೆಗಾರನಾದ ಸೋಮಣ್ಣ" ಎಂದು ಎಲ್ಲಿ ಕರೆದುಕೊಂಡುಹೋಗಿ ಮುಂದಿನ ಸಾಲಿನ ಕುರ್ಚಿಯಲ್ಲಿ ಕೂರಿಸಿಬಿಡುತ್ತಾರೋ ಎಂದು...."

ಅಷ್ಟರಲ್ಲಿ ನಾನು ಬಾಯಿ ಹಾಕಿದೆ. "ಕೂರಿಸಿದ್ದರೆ ಏನಾಗುತ್ತಿತ್ತು? ಒಳ್ಳೆಯ ಸುಖವೇ ಸಿಕ್ಕುತ್ತಿತ್ತಲ್ಲವೆ?" ಎಂದೆ.

"ಅಯ್ಯೋ ಹುಚ್ಚ. ನಿನಗೆ ತಿಳಿವಳಿಕೆಯೇ ಇಲ್ಲ. ಅಲ್ಲಿಂದ ತಪ್ಪಿಸಿಕೊಂಡು ಮಧ್ಯೆ ಬಂದುಬಿಡಬೇಕಾದರೆ ಎಷ್ಟು ಕಷ್ಟ! ಹೊತ್ತಾದರೆ, ಮಧ್ಯಾಹ್ನದ ತಂಗಳು ಕೆಟ್ಟುಹೋಗಿರುತ್ತೆ ಎಂದು ಗೊತ್ತಿಲ್ಲವೆ? ಅದು ಹಾಗಿರಲಿ, ಆಟಪಾಠಗಳು, ಪಂದ್ಯಗಳು ಎಲ್ಲಾ ನಡೆದು, ಭಾಷಣಗಳು ಕೊನೆಮೊದಲಿಲ್ಲದೆ ಆದಮೇಲೆ ಬಾಣಬಿರುಸುಗಳು ನಡೆದವು. ಅವನ್ನೆಲ್ಲಾ ನೋಡಿ ಹಿಗ್ಗಿ, ಈವತ್ತಿಗೆ ನಮ್ಮ ಜನ್ಮ ಸಾರ್ಥಕವಾಯಿತು ಎಂದು ಇನ್ನೇನು ಹೊರಡುವುದರಲ್ಲಿದ್ದೆ. ಅಷ್ಟರಲ್ಲಿ ಆಯಿತು, ನೋಡು, ವಿಪರೀತ! ಒಬ್ಬ ಸೈನಿಕ ಪುಣ್ಯಾತ್ಮ ಒಂದು "ರಾಕೆಟ್" ಅನ್ನುತ್ತಾರಲ್ಲ, ಅವನು ಅಂಟಿಸಿ ಹಾರಿಸಿದ. ಅದು ಆಕಾಶದಲ್ಲಿ ಚಿಲ್ಲಿನ ಹಾಗೆ ಬೆಳಗಿ, ಅದೇನು ನನ್ನ ಪುಣ್ಯವೋ, ಸರಿಯಾಗಿ ಬಂದು ಠಕ್ಕೆಂದು ನನ್ನ ಹೊಕ್ಕಳ ಮೇಲೆ ಹೊಡೆಯಿತು. ನಾನು ಅರಚಿಕೊಂಡು ಕೆಳಗೆ ಬಿದ್ದುಬಿಟ್ಟೆ. ಸರಿ, ಗಲಾಟೆಯೋ ಗಲಾಟೆ! ಕೋಲಾ

ಹಲವೋ ಕೋಲಾಹಲ! ಜ್ಞಾನ ತಪ್ಪಿದೆ ಎಂದು ಆಸ್ಪತ್ರೆಗೆ ಎಳೆದರು. ಅಲ್ಲಿ ಒಳಗೆ ಕರುಳಿಗೆ ಏಟುಬಿದ್ದಿದೆ ಎಂದು ಆಪರೇಷನ್ ಮಾಡಿದರು. ಎರಡು ತಿಂಗಳ ಕಾಲ ಪಾಡುಪಟ್ಟು, ಈಗತಾನೇ ತಪ್ಪಿಸಿಕೊಂಡು ಬಂದಿರುತ್ತೇನೆ. ಇದೇ ನೋಡಪ್ಪಾ, ನನ್ನ ಕಥೆ!" ಎಂದ.

ನಾನು ಇದನ್ನು ಕೇಳಿ, ಮೂಕನಾದೆ. ಬಹಳ ಹೊತ್ತಿನ ಮೇಲೆ, ನನ್ನ ವ್ಯಸನವನ್ನೆಲ್ಲಾ ಸೂಚಿಸಿದ ಮೇಲೆ ಕೇಳಿದೆ:

"ಅಲ್ಲಾ, ಸೋಮಣ್ಣ, ಇದೆಲ್ಲಾ ನನ್ನ ತಪ್ಪು ಎಂದುಕೊಂಡೆಯಲ್ಲಾ, ಇದರಲ್ಲಿ ನಿನ್ನ ತಪ್ಪೇನಿದೆ?"

ಸೋಮಣ್ಣ ಹೇಳಿದ. "ನಿನಗೆ ತರ್ಕ ಜ್ಞಾನ ಸ್ವಲ್ಪವೂ ಇಲ್ಲ, ಬೀರಣ್ಣ! ನೋಡು, ನಾನು ಸ್ವಾತಂತ್ರ್ಯಕ್ಕೋಸ್ಕರ ಹೋರಾಡದಿದ್ದರೆ, ನಮಗೆ ಸ್ವಾತಂತ್ರ್ಯ ಸಿಕ್ಕುತ್ತಿತ್ತೇ? ಸ್ವಾತಂತ್ರ್ಯ ಸಿಕ್ಕದಿದ್ದಿದ್ದರೆ, ಈ ಉತ್ಸವ ನಡೆಸುತ್ತಿದ್ದೆವೆ? ಉತ್ಸವ ನಡೆಸದೇ ಇದ್ದಿದ್ದರೆ, ನಾನು ಅಲ್ಲಿಗೆ ಹೋಗುತ್ತಿದ್ದೆನೆ? ಹೋಗದಿದ್ದಿದ್ದರೆ ನನಗೆ ಏಟು ಬೀಳುತ್ತಿತ್ತೆ? ಯೋಚಿಸಿ ನೋಡು! ಅದಕ್ಕೇ ನಾನು ಹೇಳುವುದು—ಉಣ್ಣುವುದಕ್ಕಿಲ್ಲ, ಉಡುವುದಕ್ಕಿಲ್ಲ, ಆದರೂ ನಾನು ಗಳಿಸಿದ ಸ್ವಾತಂತ್ರ್ಯ ಬಂದು ನನ್ನ ಹೊಟ್ಟೆಗೇ ಹೊಡೆಯಿತು!"

—ಬೀರಣ್ಣ.



"ನಗ್ನ ಸುಂದರಿ"ಗೆ ಮುನ್ನುಡಿ ಇವರೇ ಬರೆದೋರು.

ಜಂಬೂ ಸವಾರಿ

ಅಯ್ಯೋ ಮೈಸೂರಿಗೆ ಹೋಗುವ ಲಭ್ಯವಿಲ್ಲದೆ ಹೋಯ್ತಲ್ಲ ಈ ಸಾರಿ ಎಂದು ಮೀನಾಕ್ಷಿ ಚಿಂತಿಸುತ್ತಿದ್ದುದು ನಟ್ಟ ದೃಷ್ಟಿಯಲ್ಲಿ ಎದುರುಗಿನ ಮೊರದಲ್ಲಿನ ಅಕ್ಕಿ ಕೇರುತ್ತಾ ದಿಟ್ಟಿಸುವಾಗಲೇ ನಾನು ಕಂಡು ಹಿಡಿದೆ. ಹೇಗೆಂದರೆ, ಕಲ್ಲು ಮಣ್ಣುಂಡೆ ಭತ್ತ ಬಿಟ್ಟು ಅಕ್ಕಿಕಾಳನ್ನೇ ಆಯ್ದು ಎಸೆಯುತ್ತಿದ್ದಳು. ಅವಳ ಹೊಟ್ಟೆ ಚುರುಕ್ ಅನ್ನಿಸಿದರೆ ನನಗೆ ಅದೇನೋ ಆಪ್ಯಾಯಮಾನ. ಪೀಡಿಸತೊಡಗಿದರೆ ಪರಮ ಖುಷಿ.

"ಮೈಸೂರಿಗೆ ನಾನು ಹೋಗುವವ"

"ನಾನೂ ಹಿಂಬಾಲಿಸುವಾಕೆ"

"ಬೇಡ"

"ಯಾಕೆ ?"

"ನಂದು ಬಿಟ್ಟಿ ಪ್ರವಾಸ"

"ನಂದೂ ಬಿಟ್ಟಿ ಪ್ರವಾಸ"

"ಅದು ಹೇಗೆ ?"

"ಅದೆಲ್ಲ ನಿಮಗೇಕೆ ?"

"ನನಗಲ್ಲದೆ ಮತ್ಯಾರಿಗೆ ಬೇಕೆ ?"

"ನಿಮ್ಮ ವಿಷಯವೂ ನನಗಲ್ಲದೆ ಇನ್ಯಾವ ರಂಭೆಗೆ ಬೇಕು ?"

"ಹಲ್ಲು ಹಿಡಿದು ಮಾತಾಡು. ಗಂಡ ಅನ್ನೊ ಪರಿಜ್ಞಾನವಿರಲಿ."

"ಹೆಂಡ್ತಿ ಅನ್ನೋ ಅಭಿಮಾನವಿರಲಿ"

"ಮತ್ತೆ ಮಾತಾಡ್ತೀಯ"

"................"

"ಯಾಕೆ ಮಾತಿಲ್ಲ ಬೊಗಳು"

"ಬೌ ಬೌ ಬೌ........"

"ಥೂ ನಾಯಿ"

"ಹ್ಹ ಹ್ಹ ಹ್ಹ........ಈ ನಾಯಿಗೆ ತಾಳಿಗೆ ಕಟ್ಟಿದ ಗಂಡು ನಾಯಿ ಎಂದು ಅನ್ನಬೇಕಾಗುತ್ತದೆ"

"ಮುಚ್ಚು ಬಾಯಿ"

"................"

"ನನ್ನ ಬಟ್ಟೆ ಬರೆ ಜೋಡಿಸಿಡು—ಒಂದು ಚೀಲಕ್ಕೆ ಹಾಕು. ಹಾಸಿಗೆ ಬೇಡ."

"................"

"ಅರ್ಥವಾಯಿತೆ ?"

".... ...."

"ಮಾತಾಡೇ ?"

"ಬಾಯಿ ಮುಚ್ಚಿಕೊಂಡು ಮಾತಾಡುವುದನ್ನು ನನ್ನ ತವರುಮನೆಯವರು ಹೇಳಿಕೊಡಲಿಲ್ಲ."

"ನಾನು ಕೇಳಿದ್ದಕ್ಕೆ ಉತ್ತರ ಹೇಳು—ಹರಟೆ ಬೇಡ, ಹೌದು. ಇಲ್ಲ. ಬೊಗಳು ಅಷ್ಟೆ."

"ಹಾಗೇ ಆಗಲಿ"

"ನಾನು ಮೈಸೂರಿಗೆ ಹೋಗುವುದಕ್ಕೆ—ಬಟ್ಟೆ ಚೀಲಕ್ಕೆ ಹಾಕು"

"ಇಲ್ಲ"

"ಎದುರುತ್ತರ ಕೊಡ್ತೀಯ"

"ಹೌದು"

"ಹೌದೆ ?"

"ಇಲ್ಲ"

"ಇವತ್ತೆಲ್ಲೊ ನೀನು ಎಡಮಗ್ಗುಲಲ್ಲಿ ಎದ್ದಿದ್ದೀಯ, ಹೌದು ಇಲ್ಲಾಂದರೆ—ಬರೀ ಅದನ್ನೇ ಹಿಡಿದು ಪೀಡಿಸುತ್ತೀಯ—ಸರಿಯಾಗಿ ಉತ್ತರ ಕೊಡು."

"—ಹೆಂಗಸಿಗೇಕೆ ಆ ಸ್ವಾತಂತ್ರ್ಯ—ನೀವು ಹೇಗೆ ಹೇಳು ಅಂದರೆ ಹಾಗೆ ಹೇಳುವುದು ನನ್ನ ಕೆಲಸ."

"ನಾನು ಹೇಳೋದನ್ನ ಸರಿಯಾಗಿ ಕೇಳಿ, ಸೂಕ್ತ ಉತ್ತರ ಕೊಡು."

"ಅಪ್ಪಣೆ"

"ನಾನು ಮೈಸೂರಿಗೆ ಹೋಗುವವ—ಬಟ್ಟೆ ಗಂಟು ಕಟ್ಟು"

"ನಂದೂ ಕಟ್ಟಲೆ ?"

"ಸೂಕ್ತ ಉತ್ತರಕೊಡೇಂತ ಅಂದರೆ, ಪ್ರಶ್ನೆ ಕೇಳ್ತೀಯ ?"

"ಇಲ್ಲ"

"ಬಟ್ಟೆ ಗಂಟು ಕಟ್ಟು"

"ಯಾವ ಬಟ್ಟೆ"

"ನಿನಗೆ ಗೊತ್ತಿಲ್ಲವೇನು ?

"ಗೊತ್ತಿದೆ"

"ಮತ್ತೇಕೆ ತಲೆಹರಟೆ ?"

ತಲೆ ತಗ್ಗಿಸಿ, ಎದುರಿಗಿದ್ದ ಮೊರ ಗೋಡೆಗೆ ಸರಿಸಿ, ರೂಮಿಗೆ ಹೋದಳು. ನನ್ನ ಕರುಳು ಚುರುಕ್ ಎಂದಿತು. ಪಾಪ ಹೀಗೆ ಅವಳನ್ನು ಗದುರಬಾರದಾಗಿತ್ತು —ಏನೋ ಹುಡುಗಿ ಅವಳಿಗೂ ಬರುವ ಆಸೆ ಇರುತ್ತದೆ. ನಾನು ಮಾತ್ರ ಎಷ್ಟು ಬಿಸಿ

ನಲ್ಲಿ ಟ್ರಿಂವಮ್ಮಾಗಿ ಗ್ಯಾಬರ್ಡಿನ್ ಟೋಪಿ ಹಾಕಿಕೊಂಡು ಮೆರೆಯಬೇಕು. ಅವಳು ಬುಟ್ಟಾ ಹೂವಿನ ಜಾರ್ಜೆಟ್ ಉಡಬಾರದೆ? ಅವಳೂ ಬರಲಿ ಪಾಪ ಎಂದು ನನ್ನ ಮನಸ್ಸು ಕರಗುವ ವೇಳೆ ಸರಿಯಾಗಿ ಮುಖದಲ್ಲಿ ಕೊಬ್ಬಿದ ಕಳೆ ಹಾಕಿಕೊಂಡು, ತಾತ್ಸಾರಭಾವ ಬೀರಿ, ಬೇವರ್ಸಿಯನ್ನು ನೋಡುವಂತೆ ನನ್ನನ್ನು ಹೊಳೆಯುವ ಗಣ್ಣಲ್ಲಿ ನೋಡಿ, ಕೆಟ್ಟ ಮೂತಿ ಹಾಕಿ ಎಡಗೈಯಲ್ಲಿ ಬಟ್ಟೆ ತುಂಬಿದ ಚೀಲ ತಂದು ಎದುರಿಗೆ ಕುಕ್ಕಿ ಅಡಿಗೆ ಮನೆಗೆ ಹೊರಟುಹೋದಳು ಎಲಾ ಇವಳಿಗೆ ಇಷ್ಟು ಕೊಬ್ಬು ಬಂತೆ— ನಾನೊಬ್ಬನೇ ಜಂಬೂ ಸವಾರಿಗೆ ಹೊರಡುವುದೇ ಸರಿ ಎಂದು ನಿರ್ಧರಿಸಿದೆ. ಒಳಗಡೆಯಲ್ಲಿ ಲೋಟ ತಟ್ಟೆಯ ಸದ್ದಾಗಿ ಮಣೆ ಧಡೀರ್ ಎಂದು ಬಿದ್ದಾಗ ಎದ್ದು ಕೈಕಾಲು ತೊಳೆದು ಊಟಕ್ಕೆ ಕುಳಿತೆ. ಅದೇ ನೋಟ, ಅದೇ ಕೊಬ್ಬಿನ ಕಳೆ.

"ಸಾಕು"

"..............."

"ಸಾಕೊಂದ್ರೆ ಕೇಳೊಲ್ವೆ—ನಾನೇನು ಬಕಾಸುರಾಂತ ತಿಳಿದೆಯೇನು—ನಿಮ್ಮಪ್ಪನ ಹಾಗೆ ನನಗೂ ಕೆರೆ ಕೆಳಗಿನ ಗದ್ದೆ ಇದ್ದಿದ್ದರೆ ಎಷ್ಟು ದಂಡವಾದರೂ ತೆಪ್ಪ ನಿರುತ್ತಿದ್ದೆ."

"........ .. ...."

"ಸಾಕೇ— ಸಾರು ಒಂದೇ ಸಮನೆ ಹುಯ್ದರೆ ಹೇಗೆ ಕಲಸಿಕೊಳ್ಳೋದು"

"....... ...."

"ಅಯ್ಯೋ ರಾಮ—ತುಪ್ಪ ಕಣೆ ನೀನು ಹಾಕ್ತಾ ಇರೋದು ನೀರಲ್ಲಾ...."

"..............."

"ಇವತ್ತು ನಿನಗೇನೋ ಗ್ರಹಚಾರ ಕಣೆ, ಪಲ್ಯಾಂತ ತಿಳಿದುಕೊಂಡೇನೆ ನೀನು ಬಡಸ್ತಾ ಇರೋದು— ಅದು ಉಪ್ಪಿನಕಾಯಿ— ಎರಡೇ ಹೋಳು ಬಡಿಸೋ ಪದಾರ್ಥ."

"..............."

"ಶಿವ ಶಿವ ಶಿವ........ಮನೇಲಿ ಏನಾದರೂ ಉಪ್ಪು ಮಿಕ್ಕಿದೆಯೋ ಇಲ್ವೋ— ಸಾರು ಬರೀ ಉಪ್ಪಿನ ಉರ್ಲು...."

"..............."

"ಥೂ ಥೂ ಥು—ಹಾಳು ತಿಳಿ ನೀರಾದರೂ ಕುಡಿಯೋಣವೆಂದರೆ ಅದೂ ಕ್ಲೋರೀನ್ ವಾಸನೆ...."

" ...."

"ಅದೇನೆ ಹಾಗೆ ನೋಡ್ತೀಯ—ನಿಮ್ಮಪ್ಪನ ಮನೆಯಲ್ಲಿ ಕಾರಿರಬಹುದು— ನನಗೇನು ಬಂದದ್ದು. ಈ ಕೊಬ್ಬೆಲ್ಲಾ ಇಳಿಸಿ ಒದ್ದು ಓಣಾಹಾಕಿದರೆ ನನಗೆ ಸಮಾಧಾನ...."

"...............

"ಇರಬಹುದೇ— ಅವರೂ ಮೈಸೂರಿಗೆ ಹೋಗಬಹುದು ಅದಕ್ಕೆ ನಿನಗೆ ಈ ಪಾಟ ಕೊಟ್ಟಿರಬಾರದು—ನಾನು ಗಂಡ—ತಾಳಿ ಕಟ್ಟಿದ ಧೀರ, ನಿನ್ನ ಅರ್ಧಾಂಗ ಅವನಿಗೆ ಅವಮಾನವಾಗ್ತಾ ಇದೆ ಅನ್ನೋದು ನೆನಪಿರಲಿ."

"............ ..."

"ಹಾಗೇ ನೋಡಬೇಡ ನೋಡು—ನನಗೆ ರೇಗತ್ತೆ.... ಏನೀಗ ಇರಬಹುದು ವರದಕ್ಷಿಣೆ ಕೊಟ್ಟಿರಬಹುದು. ಅದಕ್ಕೆ ನೀನು ನನ್ನ ಕೊಂಡ ಆಳನ್ನು ನೋಡುವ ಹಾಗೆ ನೋಡಬಾರದು ... ಬಿಕನಾಸಿ ಎರಡು ಸಾವಿರ ಬಿಸಾಕಿಬಿಟ್ಟೇನು ಹೆಚ್ಚಿಗೆ ಅವಮಾನ ಮಾಡಿದರೆ...."

"....... .... ಹ್ಹಿ"

"ಏನು—ಬಿಸಾಕಲಾರೆ ಅಂತ ತಿಳಕೊಂಡ್ಯಾ.... ಅರೆ!.... ತಟ್ಟೆ ಖಾಲಿಯಾಗಿದೆ ಮಾತ್ತಿನ ಭರದಲ್ಲಿ.... .. ಅನ್ನ...."

....

"ನಾನೇನು ಭೀಮ್ನಾಂತ ತಿಳಿದೇನೆ ಮತ್ತೊಂದು ಮಣ ಅನ್ನ ಸುರಿದೆಯಲ್ಲಾ ....ಥತ್"

"..............."

"....... ಮಜ್ಗೆ ಹುಳಿ ಬೇರೆ ಮಾಡಿದ್ದೀಯ......."

"..............."

"ಬರೀ ಹುಳಿ........ ಹುಣುಸ್ಸೇಹಣ್ಣು ಧಡಿಯ ಸುರಿದಿದ್ದೀಯ."

"............... ಹ್ಹಿ ಹ್ಹಿ...."

"ಊ ಫಿ—ಮಜ್ಜಿಗೆ ಹುಳಿಗೆ ಹುಣುಸೆಹಣ್ಣು ಹಾಕೋಲ್ಲ ಅಲ್ಲವೆ?......."

"........ ....ಹ್ಹಿ ಹ್ಹಿ ಹ್ಹಿ ಹ್ಹಿ...."

"ಸಾಕೇ ನಿಲ್ಲಿಸು ನಿನ್ನ ಕೆಟ್ಟ ಅಟ್ಟಹಾಸ.... ನಿನಗೂ ಕೊಂಚ ಇರ್ಲಿ, ಎಲ್ಲಾ ನನಗೇ ಸುರಿಬೇಡ— ಹುಳೀಂತ ಹೇಳ್ತಾ ಇದ್ದೀನಿ— ಆದ್ರೂ ಸುರಿತ್ಲೇ ಇದ್ದೀಯೇ."

"....... ...."

"ಏನು ಅಡಿಗೆ ಮಾಡ್ತಿಯೋ—ನನ್ನ ಕರ್ಮ ತಿಂದು ಹೋಗಬೇಕಾಗಿದೆ."

"........... ...."

"ಕೊಂಚ ... ... ಕೊಂಚ ಮೂರೇ ಸೌಟು ಸಾರ್ನಲ್ಲಿನ ಬೇಳೆ ಹಾಕಿಬಿಡು ಮಜ್ಜಿಗೆ ಅನ್ನ ಸೇರೋದೇ ಇಲ್ಲ......."

" ... . "

"ಟ್ವಾಲು ಎಲ್ಲೀ . ....ಅಡಿಕೆ ಇದೆಯೋ?........ ಕೋಪವೇನೋ ಏನೇನೋ ಅಂದೇಂತ.... ಸಾಕು ಸಾಕು ಹನ್ನೆರಡಕ್ಕಿಂತ ಹೆಚ್ಚು ಎಲೆಗೆ ಸುಣ್ಣ ಹಚ್ಚಲೇಬೇಡ."

"..... ...."

"ನಾನು ಹೊರಡ್ತೀನಿ .. .. ಹುಷಾರು."

ರೈಲು ಮೈಸೂರು ಸೇರಿದಾಗ ಸಂಜೆಯಾಗಿತ್ತು. ಷಡ್ಕನ ಮನೆಯಲ್ಲಿ ಠಿಕಾಣಿ. ಷಡ್ಕನ ಹೆಂಡ್ತಿ ಮೀನಾಕ್ಷಿಯ ತಂಗಿ. ಕೇಳಬೇಕೆ? ಅದೇ ರಕ್ತ-ಅದೇ ಗೋತ್ರ ತದ್ವತ್ ಅದೇ ನೋಟ-ಅದೇ ದರ್ಬಾರು. ಷಡ್ಕ ಕೊಂಚ ಮಿದು ಆಸಾಮಿ-ಸರಿ ಕೇಳಬೇಕಾಗಿದ್ದೆ. ಇಲ್ಲ ಅಮ್ಮನವರದೇ ಜಂಬೂಸವಾರಿ-ಏಳು ಅಂದರೆ ಏಳು. ಕೂಡೂಂದ್ರೆ ಕೂಡು. ನಾನೇ ಗಟ್ಟಿಗ ಪರವಾಗಿಲ್ಲ ಪಳಗಿಸಿದ್ದೀನಿ ಎಂದು ಬೆನ್ನು ಚಪ್ಪರಿಸಿಕೊಂಡೆ.

"ಪ್ಯಾಂಟು ತೆಗೆದು ಪಂಚೆ ಉಟ್ಕೊಂಡು ಊಟಕ್ಕೇಳಯ್ಯ" ಎಂದ ಷಡ್ಕ. ಮಧ್ಯಾಹ್ನದ ಊಟ ನೆನಪಿಗೆ ಬಂತು. ಪಾಪ ಮೀನಾಕ್ಷಿನ್ನ ಅಷ್ಟು ಅನ್ನ ಬಾರದಾಗಿತ್ತು-ನೊಂದುಕೊಂಡಳೇನೋ-ನಾಯಿಯಂತೆ ಬಟ್ಟೆ ಬರಿ ಕಟ್ಟಿ ಒಂದು ಮಾತಾಡದೆ ಅತಿ ವಿಧೇಯಳಾಗಿದ್ದಳಲ್ಲಾ ಅವಳನ್ನೂ ಕರೆದುಕೊಂಡು ಬರಬೇಕಿತ್ತು-ನಾನು ಅತಿ ಕ್ರೂರಿ ಎಂದು ಚಿಂತಿಸಿದೆ. ತೀರಾ ಮಿದುವಾಗಿರಬಾರದು-ಎಲ್ಲಿಟ್ಟಿರಬೇಕೋ ಅಲ್ಲಿಟ್ಟಿರಬೇಕು ಹೆಂಡಿರನ್ನ ಎಂದು ಅನೇಕ ಬಾರಿ ಷಡ್ಕನನ್ನು ಎಚ್ಚರಿಸಿದ್ದೆ. ಅವನ ಕೋಳಿಕುಕ್ಕ ಜಾಯಮಾನ ಎಲ್ಲಿ ಹೋಗತ್ತೆ. ಚೀಲಕ್ಕೆ ಕೈ ಹಾಕಿ ಬಟ್ಟೆ ಹೊರಕ್ಕೆಳೆದೆ. ಅರೆ! ಮೀನಾಕ್ಷಿಯ ಸೀರೆ!-ರವಕೆ-ಪೆಟ್ಟಿಕೋಟು-ಅವಳ ಟೌಲು-ಕಾಡಿಗೆ ಡಬ್ಬಿ ಕನ್ನಡಿ-ರಾಮ ರಾಮ ಇದೇನು ಹೀಗಾಯಿತೆ ನನ್ನ ಪಾಡು. ಷಡ್ಕ ಅವನ ಹೆಂಡ್ತಿ ಒಂದೇಸಮ ಬಿದ್ದು ಬಿದ್ದು ನಕ್ಕರು. ನಾನು ಬೆವತು ಹಳ್ಳವಾದೆ. ಎಲಾ ಅವಳ ಸೀರೆ ಕಪ್ಪುಸ ಹೊರುವ ಪಾಡಾಯಿತೆ ಈ ಗಂಡು ಜೀವನಕ್ಕೆ ಎಂದು ನಾನು ಅವಮಾನಿತನಾಗಿ ಬೆಳದ ಮೀಸೆ ಉದುರಿ-ಕೈಯ್ಯಲ್ಲಿ ಬಳೆ ಬಂದು ಗಲ್ಲಕ್ಕೆ ಅರಿಸಿನ ಬಳಿದುಕೊಂಡಂತೆ ಭಾಸವಾಯಿತು ಒಂದು ಕ್ಷಣ. ನನಗೆ ಪರಮ ಅನ್ಯಾಯವಾಗಿತ್ತು.

ಕಣ್ಣುಜ್ಜಿ ನೋಡಿದೆ. ಗುಲಾಬಿಯಂತೆ ನಗುತ್ತಾ ನೀಲಿ ಬಣ್ಣದ ಜಾರ್ಜೆಟ್ ಧರಿಸಿದ ಮೀನಾಕ್ಷಿ ಒಳಗಿನಿಂದ ಬಂದಳು.

"ಅರೆ! ನೀನಿಲ್ಲಿ .. ಹೇಗೆ ಬಂದೆ? "


"ನಮ್ಮಪ್ಪನ ಕಾರಿನಲ್ಲಿ-ನಾನು ಪಾಪ ಹೋಗಲೀಂತ ತಡೆದುಕೊಂಡಷ್ಟೂ ನಿಮ್ಮ ನಾಲಿಗೆ ವಿಪರೀತ ಹರಿತವಾಯ್ತು-ನೀವು ಆ ಕಡೆ ರೈಲು ಹತ್ತುತ್ತಲೂ ನಾವು ಕಾರು ಹತ್ತಿದೆವು."

"ಅದಕ್ಕೆ ನನ್ನ ರವಕೆ ಸೀರೆ ನಿಮ್ಮ ಹತ್ತಿರ ಹೊರಿಸಿ ಕಳಿಸಿದ್ದು"

ಪಕಪಕನೆ ನಗುತ್ತಾ ಮಾವ ಅತ್ತೆ-ಭಾವಮೈದ ಎಲ್ಲರೂ ಒಳಗಿಂದ ಬಂದರು. ನಾನು ತಲೆ ತಗ್ಗಿಸಿದೆ. ಇವಳ ತೌರುಮನೆ ಖದೀಮರು ದೊಡ್ಡ ಮಸಲತ್ತು ಮಾಡಿ

ದ್ದರು. ಇಬ್ಬರೇ ನಾವಿದ್ದಾಗ ನಾ ಮಾಡಿದ ಅವಮಾನ-ಜೋರಿಗೆ-ಎಲ್ಲರೆದುರೂ ಸೇಡು ತೀರಿಸಿಕೊಂಡ ಮೀನುವನ್ನು ನುಂಗುವಂತೆ ದೊಡ್ಡ ಮೀನಿನಂತೆ ನೋಡಿದೆ. ಅವಳ ಕಣ್ಣ ಹೊಳಪು ಗುಲಾಬಿ ಕೆನ್ನೆ-ಬಿಲ್ಲಿನ ಹುಬ್ಬು-ತೊಂಡೆಯಂಥ ತುಟಿ—ಉಬ್ಬಿದ ಎದೆ ಬಡನಡು ಕಂಡು ಡಂಗು ಬಡಿದು ಕನ್ನಂಬಾಡಿ ಕಂಡ ಕಮಂಗಿಯಂತೆ ನಿಂತುಬಿಟ್ಟೆ. ಏನಾದರೂ ಅವಳದೇ ಕೈ ಮೇಲು—ಎಂದು ಜಂಬುಸವಾರಿಗೆ ಹೊರಡಲು ಅವಳು ಕೈಲಿ ಹಿಡಿದ ಪಂಚೆ ಉಟ್ಟು ಊಟಕ್ಕೆ ಅಣಿಯಾದೆ. ತಗ್ಗಿಸಿದ ತಲೆ ಎತ್ತದೆ ಒಂದೇ ಸಮ ತಿಂದು ಎದ್ದೆ.

—ದಾಶರಥಿ ದೀಕ್ಷಿತ್.



ಸಂಸಾರ ಶಬ್ದಾರ್ಥ ಕೋಶ

		ಸ್ತ್ರೀ ಲಿಂಗ
ಅವರ ವಿಷಯ ಏನು ಹೇಳಲಿ	....	ಗಂಡ ಶುದ್ಧ ಅಪ್ರಯೋಜಕ
ಆಫೀಸಿಂದ ಬಂದಿಲ್ಲ	....	ಗಂಡ ಇನ್ನೂ ಬಂದಿಲ್ಲ
ಇದಕ್ಕೆ ಮೂಗಿನ ತುದಿಯಲ್ಲೇ ಕೋಪ	...	ಗಂಡ ಮುಂಗೋಪಿ
ಇಲ್ಲಿ ಬನ್ನಿ, ಅಂದ್ರೆ	....	ಕೋಪದ ಆಹ್ವಾನ
ಇವನ ತಂದೆ	....	ಗಂಡ
ಇವರಿಗೂ ಜ್ವರ	....	ಪತಿದೇವನಿಗೆ ಜ್ವರ
ಈ ಮನೆಯಲ್ಲಿ ಸದಾ ಗೋಳು	....	ಪತಿಗೆ ಕೊರಗು ಹೆಚ್ಚು
ಏನು ? ನಾನು ಹೇಳುವುದು ?		ಕಿವಿ ಕೊಡಿ, ಕೊಂಚ
ಗಂಡಸರು ಊರಲ್ಲಿಲ್ಲ	....	ಪತಿ ಪರಸ್ಥಳ
ಜೊತೆಯಲ್ಲೇ ಹೋಗಿದ್ದೆವು	..	ದಂಪತಿ ಸಮೇತ
ನಮ್ಮ ಯಜಮಾನರು	....	ಅವರು
ನಮ್ಮ ಮನೆಯಲ್ಲೂ ಊಟ ಹೊತ್ತು		ಅವರು ಬರುವುದು ತಡ
ನಮ್ಮಲ್ಲಿ ಅವರೆಕಾಯಿ ಇಷ್ಟ	....	ಪತಿಗೆ ಪ್ರೀತಿ
ನಮ್ಮವರು ಇಂಥದ್ದು ತಂದು ಕೊಡುವುದಿಲ್ಲ	....	ಆತ ಜಿಪುಣ
ಮನೆಯಲ್ಲಿಲ್ಲ	....	ಗಂಡ ಹೊರಗಡೆ
ಯಾರಾದರೂ ಎತ್ತಿಕೊಳ್ಳುತ್ತಾರೆ, ಮಗು	....	ಗಂಡನಿಗೆ ಆಜ್ಞೆ
ಯಾರಿಗೆ ಹೇಳಿ ಏನು ಪ್ರಯೋಜನ	....	ಗಂಡನಿಗೆ ಹೇಳಿ ಏನು ಪ್ರಯೋಜನ ?
ಸ್ವಲ್ಪ ಇಲ್ಲಿ ಬನ್ನಿ	....	ಗಂಡನಿಗೆ ಆಹ್ವಾನ, ಆಜ್ಞೆ
ಹೆಸರು ಹೇಳಬಾರದವರು	....	ಪತಿದೇವ

—ಶಾರಾಂಶ